ಸಂಪಾದಕರು
ಆನಂದಯ್ಯ ವಿರಕ್ತಮಠ
ಎಂ.ಎ ಪತ್ರಿಕೋಧ್ಯಮ
ಎಂ.ಎ ಇಂಗ್ಲೀಷ್ , ಬಿ.ಇಡಿ

Title code: KNKAN/26/A0482

# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES | janashreetimes2026@gmail.com | KANNADA DAILY MORNING

ಸಂಪುಟ : 01 ಸಂಚಿಕೆ : 04 ದಿನಾಂಕ: 07-06-2026 ಭಾನುವಾರ ಪುಟ : 04 ದರ : 4 ರೂ. VOLUME 01 ISSUE:04 SUNDAY 07-06-2026 PAGE: 04 PRICE : 4/-

## ಕಪ್ಪತ್ತಗುಡ್ಡದಲ್ಲಿ ಚಿರತೆ ಪ್ರತ್ಯಕ್ಷ ಸಾರ್ವಜನಿಕರಲ್ಲಿ ಆತಂಕ



ಗದಗ: ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕಪ್ಪತ್ತಗಿರಿಯ ದೋಣಿ ತಾಂಡಾ ಹಾಗೂ ಗ್ವಾಲಗೇರಿ ಮಠದ ಮಾರ್ಗದಲ್ಲಿ ಚಿರತೆ ಪ್ರತ್ಯಕ್ಷವಾಗಿದೆ. ಸಾಯಂಕಾಲ ನಿರಾಂತಕದಿಂದ ರಸ್ತೆಯಲ್ಲಿ ಚಿರತೆಯ ಓಡಾಟ ಕಂಡು ಸ್ಥಳೀಯರಲ್ಲಿ ಆತಂಕ ಉಂಟಾಗಿದೆ.

ಆಹಾರ ಅರಸಿ ರಸ್ತೆಗೆ ಬಂದಿದ್ದ ಚಿರತೆಯಿಂದ ಆತಂಕಗೊಂಡಿರುವ ಗ್ರಾಮಸ್ಥರು ಚಿರತೆ ಬಗ್ಗೆ ಮಾಹಿತಿ ತಿಳಿದು, ಅರಣ್ಯ ಇಲಾಖೆ ಸಿಬ್ಬಂದಿಗಳು ಚಿರತೆಯನ್ನು ರಕ್ಷಿಸಿ, ಆತಂಕಮುಕ್ತಗೊಳಿಸಬೇಕೆಂದು ಆಗ್ರಹಿಸುತ್ತಿದ್ದಾರೆ.

## ಕಾನೂನು ತರಬೇತಿಗೆ ಅರ್ಜಿ ಆಹ್ವಾನ

ವಿಜಯನಗರ: ಪ್ರಸಕ್ತ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ಪ್ರವರ್ಗ–1, ಪ್ರವರ್ಗ–2, 3ಎ ಹಾಗೂ 3ಬಿ ಅಭ್ಯರ್ಥಿಗಳಿಂದ ಕಾನೂನು ತರಬೇತಿಗೆ ಅರ್ಜಿ ಆಹ್ವಾನಿಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 10 ಕೊನೆಯ ದಿನವಾಗಿದೆ.

ತರಬೇತಿ ಪಡೆಯಬಯಸುವ ಅಭ್ಯರ್ಥಿಗಳು ಜಿಲ್ಲೆಯವರಾಗಿದ್ದು, 38 ವರ್ಷ ವಯೋಮಿತಿ ಮೀ–ರಿರಬಾರದು. ಪ್ರವರ್ಗ–1ರ ಅಭ್ಯರ್ಥಿಗಳ ವಾರ್ಷಿಕ ಆದಾಯ 3.50 ಲಕ್ಷ, ಪ್ರವರ್ಗ–2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ವಾರ್ಷಿಕ ಆದಾಯರೂ.2.5 ಲಕ್ಷ ಮಿತಿ ಹೊಂದಿರಬೇಕು. ಕಾನೂನು ತರಬೇತಿಯು ನಾಲ್ಕು ವರ್ಷಗಳ ಅವಧಿಯಾಗಿದ್ದು, ಮಾಸಿಕ 4 ಸಾವಿರ ತರಬೇತಿ ಭತ್ಯೆ ನೀಡಲಾಗುವುದು. ಜಿಲ್ಲೆಯಿಂದ 10 ಅಭ್ಯರ್ಥಿಗಳನ್ನು ಮಾತ್ರ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಿಂದ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. 2 ವರ್ಷದ ಕಾನೂನು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಜೊತೆಗೆ ಬಾರ್ ಕೌನ್ಸಿಲ್ ನಲ್ಲಿ ಹೆಸರು ನೋಂದಾಯಿಸಿರಬೇಕು. ಅಭ್ಯರ್ಥಿಗಳು ಅರ್ಜಿಯ ಜೊತೆಗೆ ಎಸ್‌ಎಸ್‌ಎಲ್‌ಸಿ, ಪದವಿ ಹಾಗೂ ಕಾನೂನು ಪದವಿಗಳಲ್ಲಿ ಪಡೆದ ಅಂಕಪಟ್ಟಿ ಪ್ರಮಾಣ ಪತ್ರದ ದೃಢೀಕರಣ ಪ್ರತಿಗಳನ್ನು ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ಎಸ್ ಪಿ ಕಚೇರಿ ಹಿಂಭಾಗದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿಗೆ ಬೇಟಿ ನೀಡಬಹುದು ಅಥ–ವಾ ದೂ.ಸಂ: 08394–223518 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಏಕಿಷ್ಟು ಪೈಪೋಟಿ

ಬೆಂಗಳೂರು: ಬೆಂಗಳೂರು ನಗರ ಅಭಿವೃದ್ಧಿ ಇಲಾಖೆಯು ಕರ್ನಾಟಕದ ರಾಜಕೀಯದಲ್ಲಿ ಅತಿ ಹೆಚ್ಚು ಬೇಡಿಕೆಯಿರುವ ಮತ್ತು ಪ್ರತಿಷ್ಠಿತ ಖಾತೆಗಳಲ್ಲಿ ಒಂದಾಗಿದೆ. ಇತ್ತೀಚಿನ ರಾಜಕೀಯ ಬೆಳವಣಿಗೆಗಳಲ್ಲಿ ಈ ಖಾತೆಗಾಗಿ ಸಚಿವರ ನಡುವೆ ನಡೆಯುತ್ತಿರುವ ಪೈಪೋಟಿ ಭಾರೀ ಮಹತ್ವ ಪಡೆದುಕೊಂಡಿದೆ.

ಈ ಇಲಾಖೆಯು ಕೇವಲ ಒಂದು ಆಡಳಿತಾತ್ಮಕ ವಿಭಾಗವಲ್ಲ, ಇದು ರಾಜ್ಯದ ಆರ್ಥಿಕ ಮತ್ತು ರಾಜಕೀಯ ಶಕ್ತಿಯ ಕೇಂದ್ರಬಿಂದುವಾಗಿದೆ. ಇದರ ಮಹತ್ವಕ್ಕೆ ಮುಖ್ಯ ಕಾರಣಗಳು ಹಲವಾರು. ಬೆಂಗಳೂರು ಕರ್ನಾಟಕದ ಆರ್ಥಿಕತೆಯ ದಿಕ್ಸೂಚಿ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಎಸ್ ಡಿಪಿ) ಬೆಂಗಳೂರಿನ ಕೊಡುಗೆ ಶೇ. 40ಕ್ಕೂ ಅಧಿಕವಾಗಿದೆ. ರಾಜ್ಯದ ಬೊಕ್ಕಸಕ್ಕೆ ಸಿಗುವ ಬಹುಪಾಲು ತೆರಿಗೆ ಆದಾಯ ಇಲ್ಲಿಂದಲೇ ಹ–ರಿದು ಬರುತ್ತದೆ. ಈ ಇಲಾಖೆಯ ವ್ಯಾಪ್ತಿಯಲ್ಲಿ ನೂರಾರು ಕೋಟಿ ರೂಪಾಯಿಗಳ ಬೃಹತ್ ಯೋಜನೆಗಳಿವೆ. ನಮ್ಮ ಮೆಟ್ರೋ ವಿಸ್ತರಣೆ, ಟನಲ್ ರಸ್ತೆಗಳು, ಮೇಲ್ಸೇತುವೆಗಳು ಮತ್ತು ಕೆರೆಗಳ ಅಭಿವೃದ್ಧಿಯಂತಹ ಮೆಗಾ ಯೋಜನೆಗಳ ಮೇಲೆ ನೇರ ನಿಯಂತ್ರಣ ಸಿಗುವುದರಿಂದ ಸಚಿವರು ಈ ಖಾತೆಯ ಮೇಲೆ ಕಣ್ಣಿಡುತ್ತಾರೆ. ಬಿಡಿಎ, ಜಲಮಂಡಳಿ, ಬಿಎಂಆರ್‌ಸಿಎಲ್ ಮತ್ತು ಗ್ರೇಟ–ರ್ ಬೆಂಗಳೂರು ಅಥಾರಿಟಿ ಮುಂತಾದ ಪ್ರಮುಖ ಸಂಸ್ಥೆಗಳ ಮೇಲೆ ಈ ಇಲಾಖೆಯ ಹತೋಟಿ




ಇರುತ್ತದೆ. ಭೂಸ್ವಾಧೀನ, ಲೇಔಟ್ ಅನುಮೋದನೆ ಮತ್ತು ನಗರ ಯೋಜನೆಯಂತಹ ಮಹತ್ವದ ನಿರ್ಧಾರಗಳು ಇಲ್ಲಿಂದಲೇ ನಿರ್ಧಾರವಾಗುತ್ತವೆ.

**ಸಚಿವರ ನಡುವೆ ಪೈಪೋಟಿ ಏಕೆ? :**

ರಾಜಕಾರಣಿಗಳು ಈ ಖಾತೆಯನ್ನು ಪಡೆಯಲು ಪಟ್ಟು ಹಿಡಿಯಲು ಹಲವು ಕಾರಣಗಳಿವೆ. ಬೆಂಗಳೂರಿನಲ್ಲಿ ಕೈಗೊಳ್ಳುವ ಅಭಿವೃದ್ಧಿ ಕೆಲಸಗಳು ನೇರವಾಗಿ ಜನರ ಗಮನ ಸೆಳೆಯುತ್ತವೆ. ಇಲ್ಲಿನ 28 ವಿಧಾನಸಭಾ ಕ್ಷೇತ್ರಗಳು ಇಡೀ ರಾಜ್ಯದ ರಾಜಕೀಯ ಮುಖವನ್ನು ಬದಲಿಸುವ ಸಾಮರ್ಥ್ಯ ಹೊಂದಿವೆ. ಈ ಖಾತೆ ನಿರ್ವಹಿಸುವವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಸಿಗುತ್ತದೆ. ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಗಳಷ್ಟೇ ಪ್ರಭಾವಶಾಲಿಯಾಗಿ ಕೆಲಸ ಮಾಡಲು ಈ ಖಾತೆ ಅವಕಾಶ ನೀಡುತ್ತದೆ. ಹೈಕಮಾಂಡ್ ಮಟ್ಟದಲ್ಲಿ ತಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಇದು ಅತ್ಯುತ್ತಮ ವೇದಿಕೆ. ನಗರದ ಅಭಿವೃದ್ಧಿ, ರಸ್ತೆಗಳು, ಮತ್ತು ಮೂಲಭೂತ ಸೌಕರ್ಯಗಳ ವಿಷಯದಲ್ಲಿ ಈ ಖಾತೆಯ ಸಚಿವರು ನಿರ್ಣಾಯಕ ಪಾತ್ರ ವಹಿಸುವುದರಿಂದ, ಸಹಜವಾಗಿಯೇ ಪ್ರಭಾವೀ ಲಾಬಿಗಾರರು ಮತ್ತು ಹಿರಿಯ ನಾಯಕರು ಈ ಖಾತೆಯನ್ನು ಆಕಾಂಕ್ಷಿಸುತ್ತಾರೆ.

**ಆರ್ಥಿಕ ಎಂಜಿನ್ :**

ಕರ್ನಾಟಕದ ಒಟ್ಟು ಆರ್ಥಿಕತೆಯಲ್ಲಿ ಬೆಂಗಳೂರಿನ ಪಾಲು ಶೇ. 43ಕ್ಕೂ ಹೆಚ್ಚಾಗಿದೆ. ಮಾಹಿತಿ ತಂತ್ರಜ್ಞಾನ ರಫ್ತಿನಲ್ಲಿ ಶೇ. 98 ರಷ್ಟು ಕೊಡುಗೆಯನ್ನು ಬೆಂಗಳೂರು ನೀಡುತ್ತದೆ. ಬಿಡಿಎ ಮತ್ತು ಬಿಬಿಎಂಪಿಯಂತಹ ಸಂಸ್ಥೆಗಳು ಆಸ್ತಿ ತೆರಿಗೆ, ಅನಧಿಕೃತ ಕಟ್ಟಡಗಳ ಸಕ್ರಮ ಮತ್ತು ಜಮೀನುಗಳ ಅಭಿವೃದ್ಧಿಯ ಮೂಲಕ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ಆದಾಯ ತಂದುಕೊಡುತ್ತವೆ. ಉದಾಹರಣೆಗೆ, ಅನಧಿಕೃತ ಕಟ್ಟಡಗಳ ಸಕ್ರಮದಿಂದಲೇ ಬಿಡಿಎ ಸುಮಾರು 6,000 ಕೋಟಿ ರೂ. ಆದಾಯ ನಿರೀಕ್ಷಿಸುತ್ತಿದೆ.

**ರಾಜಕೀಯ ಪ್ರಭಾವ ಮತ್ತು ಮತಬ್ಯಾಂಕ್ :**

ಬೆಂಗಳೂರಿನಲ್ಲಿ 28 ವಿಧಾನಸಭಾ ಕ್ಷೇತ್ರಗಳಿವೆ. ಈ ಇಲಾಖೆಯು ಕೈಗೊಳ್ಳುವ ನಿರ್ಧಾರಗಳು (ರಸ್ತೆ, ಮೂಲಸೌಕರ್ಯ, ವಸತಿ ಯೋಜನೆಗಳು) ಲಕ್ಷಾಂತರ ಮತದಾರರ ಮೇಲೆ ನೇರ ಪರಿಣಾಮ ಬೀರುತ್ತವೆ. ಈ ಖಾತೆಯನ್ನು ಹೊಂದಿರುವ ಸಚಿವರು ನಗರದ ಅಭಿವೃದ್ಧಿಯ ಮುಖವಾಗಿ ಕಾಣಿಸಿಕೊಳ್ಳುವುದರಿಂದ, ಇದು ಅವರ ವರ್ಚಸ್ಸನ್ನು ಹೆಚ್ಚಿಸಲು ಮತ್ತು ಮತಬ್ಯಾಂಕ್ ಭದ್ರಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

2ನೇ ಪುಟಕ್ಕೆ....

# ಕ್ವಾರಿ ಹಾಗೂ ಸ್ಟೋನ್ ಕ್ರಷರ್ ಮಾಲೀಕರ ಅಳಲು ಜಲ್ಲಿ ದರ ಏರಿಕೆ ಅನಿವಾರ್ಯ

ಗದಗ: ದೇಶದಲ್ಲಿ ಪೆಟ್ರೋಲ್, ಡೀಸೆಲ್, ವಿದ್ಯುತ್, ಆಯಿಲ್, ಗ್ರೀಸ್, ಕಾರ್ಮಿಕರ ವೇತನ ಸೇರಿದಂತೆ ಕಲ್ಲುಗಣಿ ಹಾಗೂ ಸ್ಟೋನ್ ಕ್ರಷರ್ ಉದ್ಯಮಕ್ಕೆ ಅಗತ್ಯವಿರುವ ಎಲ್ಲ ಪರಿಕರಗಳ ಬೆಲೆ ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಜಲ್ಲಿ ಹಾಗೂ ಇತರೆ ಕಲ್ಲು ಉತ್ಪನ್ನಗಳ ದರ ಹೆಚ್ಚಳ ಅನಿವಾರ್ಯವಾಗಿದೆ ಎಂದು ಗದಗ ಕ್ವಾರಿ ಹಾಗೂ ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಆರ್ ಸಿ ಕಾಮಾಜಿ ಹೇಳಿದರು.

ಅವರು ನಗರದ ಪತ್ರಿಕಾಭವನದಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸಿ, ಸಂಘದ ಪದಾಧಿಕಾರಿಗಳು, ಸ್ಟೋನ್ ಕ್ರಷರ್ ಉದ್ಯಮದ ಮೇಲೆ ಸರ್ಕಾರ ಇಲ್ಲದ ಕಾನೂನುಗಳನ್ನು ಜಾರಿಗೆ ತಂದು ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿದರು. ರಾಜಧನ (ರಾಯಲ್ಟಿ) ಮೊತ್ತವನ್ನು ಹೆಚ್ಚಿಸಿರುವುದಲ್ಲದೇ ಕಲ್ಲುಗಣಿಗಳ ಮೇಲೆ ಪದೇ ಪದೇ ದಂಡ ವಿಧಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿ ವರ್ಷ ಗಣಿ ಮತ್ತು ಕ್ರಷರ್‌ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ (ಆಒಉ) ಅಡಿಟ್ ಮಾಡಿ ವರದಿ ನೀಡುತ್ತಿದ್ದರೂ, ಇದೀಗ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕೆ ಕೇಂದ್ರ (ಏಖಖಖಂಅ) ನಡೆಸಿದ ಡ್ರೋನ್ ಸರ್ವೆ ವರದಿಯ ಆಧಾರದ ಮೇಲೆ ಒನ್ ಟೈಮ್ ಸೆಟಲ್‌ಮೆಂಟ್ (ಔಖಖ) ಹೆಸರಿನಲ್ಲಿ ಭಾರೀ ಪ್ರಮಾಣದ ದಂಡದ ನೋಟಿಸ್‌ಗಳನ್ನು ನೀಡಲಾಗುತ್ತಿದೆ. ಇದರಿಂದ ಇಲಾಖೆಯ ಅಡಿಟ್ ವರದಿಗಳ ಮಹತ್ವವೇ ಪ್ರಶ್ನಾರ್ಥ–ಕವಾಗಿದೆ ಎಂದು ಸಂಘ ಆರೋಪಿಸಿದೆ. ಇನ್ನು 2005–06ರಿಂದ 2024ರವರೆಗೆ ಸುಮಾರು 18 ವರ್ಷಗಳ ಅವಧಿಯ ಡ್ರೋನ್ ಸರ್ವೆ ವರದಿಯನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಮಾಲೀಕರಿಗೆ ದಂಡ ವಿಧಿಸುವುದು ನ್ಯಾಯ ಸಮ್ಮತವಲ್ಲ. ಹಿಂದಿನ ತಲೆಮಾರುಗಳ



ಅವಧಿಯ ಲೆಕ್ಕಾಚಾರವನ್ನು ಈಗಿನ ಮಾಲೀಕರ ಮೇಲೆ ಹೊರಿಸುವುದು ಸರಿಯಲ್ಲ ಎಂದು ಸಂಘದ ಕಾರ್ಯದರ್ಶಿ ಸುರೇಂದ್ರರೆಡ್ಡಿ ಅಭಿಪ್ರಾಯಪಟ್ಟರು.

ಒಂದೇ ವಸ್ತುವಿನ ಮೇಲೆ ಎರಡು ಕಡೆ ರಾಯಲ್ಟಿ ಸಂಗ್ರಹಿಸಲಾಗುತ್ತಿದೆ. ಗಣಿಗಳಿಂದ ಒಂದು ಬಾರಿ ಹಾಗೂ ಸರ್ಕಾರಿ ಕಾಮಗಾ–ರಿಗಳ ಗುತ್ತಿಗೆದಾರರಿಂದ ಮತ್ತೊಮ್ಮೆ ರಾಯಲ್ಟಿ ಪಡೆಯಲಾಗುತ್ತಿದೆ ಎಂದು ಸಂಘ ದೂರಿದೆ. ಈ ಎಲ್ಲ ಕಾರಣಗಳಿಂದ ಉತ್ಪಾದನಾ ವೆಚ್ಚ ಭಾರೀ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಜಲ್ಲಿ ಹಾಗೂ ಇತರೆ ಕಲ್ಲು ಉತ್ಪನ್ನಗಳ ಬೆಲೆ ಏರಿಕೆ ಮಾಡುವುದು ಅನಿವಾರ್ಯ ಪರಿಸ್ಥಿತಿಯಾಗಿದೆ. ತಮ್ಮ ಸಮಸ್ಯೆಗಳನ್ನು ಸಾರ್ವಜನಿಕರು ಹಾಗೂ ಗ್ರಾಹಕರ ಗಮನಕ್ಕೆ ತರಲು ಮಾಧ್ಯಮಗಳ ಮೂಲಕ ಮನವಿ ಮಾಡಿದರು. ಇನ್ನು ಎರಡು ದಿನಗಳ ಕಾಲ ಕ್ರಷರ್ ಗಳನ್ನ ಬಂದ ಮಾಡಲಾಗುವುದು ಎಂದು ಹೇಳಿದರು

# ಗದಗ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಮಾದರಿಯಾದ ಮತ್ಸ್ಯ ಸಂಜೀವಿನಿ ಯೋಜನೆ ಮೀನುಗಾರಿಕೆಯಿಂದ ಸ್ವಸಹಾಯ ಸಂಘದ ಮಹಿಳೆಯರಿಗೆ ಉತ್ತಮ ಆದಾಯ

ಗದಗ: DAY-NRLM ಸಂಜೀವಿನಿ ಯೋಜನೆಯಡಿ ಅನುಷ್ಠಾನಗೊಂಡಿರುವ "ಮತ್ಸ್ಯ ಸಂಜೀವಿನಿ" ಯೋಜನೆಯು ಗದಗ ಜಿಲ್ಲೆಯ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಹೊಸ ದಿಕ್ಕು ತೋರಿಸಿದೆ.

ತಾಲೂಕಿನ ಹಾತಲಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಂಬಾಪುರ ಗ್ರಾಮದ ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಮೀನು ಸಾಕಾಣಿಕೆ ಮೂಲಕ ಉತ್ತಮ ಆದಾಯ ಗಳಿಸಿ ಇತರ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಜಿಲ್ಲೆಯಾದ್ಯಂತ 16 ಗ್ರಾಮ ಪಂಚಾಯತ್ ಮಟ್ಟದ ಕೆರೆಗಳನ್ನು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಮೂಲಕ ಗುತ್ತಿಗೆ ಪಡೆದು ಸ್ವಸಹಾಯ ಸಂಘಗಳ ಸದಸ್ಯರಿಗೆ ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಮಹತ್ವಾಕಾಂಕ್ಷಿ ಯೋಜನೆಯಡಿ ಹಾತಲಗೇರಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟ ಹಾಗೂ ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಕೈಜೋಡಿಸಿ ಯಶಸ್ವಿ ಮೀನುಗಾರಿಕೆ ಮಾದರಿಯನ್ನು ನಿರ್ಮಿಸಿದ್ದಾರೆ.

ಹೋರಾಟದಿಂದ ಆರಂಭವಾದ ಪಯಣ ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿದವರಾಗಿದ್ದು, ಅಲ್ಪ ಪ್ರಮಾಣದ ಕೃಷಿ ಹಾಗೂ ಕೂಲಿ ಕೆಲಸಗಳನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಕುಟುಂಬದ ಅಗತ್ಯಗಳನ್ನು ಪೂರೈಸುವುದು ಕೂಡ ಸವಾಲಾಗಿದ್ದ ಸಂದರ್ಭದಲ್ಲಿ ಸಂಜೀವಿನಿ ಯೋಜನೆಯಡಿ ಅವರನ್ನು ಗುರುತಿಸಿ ಹೊಸ ಜೀವನೋಪಾಯದ ಅವಕಾಶ ಒದಗಿಸಲಾಯಿತು. ಕಳೆದ ವರ್ಷ 2025 ರಲ್ಲಿ ಜಿಲ್ಲಾ ಪಂಚಾಯತ್ ಗದಗ ಜಿಲ್ಲಾ ಸಂಪನ್ಮೂಲ ಕೇಂದ್ರ, ಹುಲಕೋಟೆಯಲ್ಲಿ ಗದಗ ಮೀನುಗಾರಿಕೆ ಇಲಾಖೆಯ ಸಹಯೋಗದೊಂದಿಗೆ





ಮೂರು ದಿನಗಳ ವಸತಿ ಸಹಿತ ವಿಶೇಷ ತರಬೇತಿ ನೀಡಲಾಗಿತ್ತು. ತರಬೇತಿಯಲ್ಲಿ ಮೀನು ಸಾಕಾಣಿಕೆಯ ವೈಜ್ಞಾನಿಕ ವಿಧಾನಗಳು, ಕೆರೆ ನಿರ್ವಹಣೆ, ಮೀನುಗಳ ಪೋಷಣೆ, ಆಹಾರ ನಿರ್ವಹಣೆ ಹಾಗೂ ಮಾರುಕಟ್ಟೆ ಸಂಪರ್ಕದ ಕುರಿತು ಸಮಗ್ರ ಮಾಹಿತಿ ನೀಡಿದ್ದರು. ಕೆರೆಯಿಂದ ಆರಂಭವಾದ ಹೊಸ ಬದುಕು ತರಬೇತಿ ಪೂರ್ಣಗೊಂಡ ಬಳಿಕ ಹಾತಲಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಮೃತ ಸರೋವರ ಯೋಜನೆಯಡಿ ನಿರ್ಮಿಸಲಾದ ಕೆರೆಯನ್ನು ನಿಯಮಾನುಸಾರ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟ ಗುತ್ತಿಗೆ ಪಡೆದುಕೊಂಡಿತು. ನಂತರ ಒಕ್ಕೂಟ ಮತ್ತು ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ನಡುವೆ ಒಪ್ಪಂದ ಮಾಡಿಕೊಂಡು ಮೀನುಗಾರಿಕೆ ಚಟುವಟಿಕೆಗೆ ಚಾಲನೆ ನೀಡಲಾಯಿತು.

**ಫಲಾನುಭವಿಯ ಸಂತಸ ಮಾತು..**
**"ಹಿಂದೆ ನಮ್ಮ ಕುಟುಂಬದ ಆದಾಯ ತುಂಬಾ ಕಡಿಮೆಯಾಗಿತ್ತು. ಸಂಜೀವಿನಿ ಯೋಜನೆಯಡಿ ದೊರೆತ ತರಬೇತಿ ಮತ್ತು ಅವಕಾಶದಿಂದ ಮೀನುಗಾರಿಕೆಯನ್ನು ಕಲಿತು ಇಂದು ಸ್ವಂತ ಆದಾಯ ಗಳಿಸುತ್ತಿದ್ದೇವೆ. ನಮ್ಮ ಮಕ್ಕಳ ಶಿಕ್ಷಣ ಹಾಗೂ ಕುಟುಂಬದ ಅಗತ್ಯಗಳನ್ನು ಆತ್ಮವಿಶ್ವಾಸದಿಂದ ಪೂರೈಸುತ್ತಿದ್ದೇವೆ. ನಮ್ಮ ಬದುಕಿನಲ್ಲಿ ಮತ್ಸ್ಯ ಸಂಜೀವಿನಿ ಯೋಜನೆ ಹೊಸ ಬೆಳಕು ತಂದಿದೆ." ಶಿವಲೀಲಾ ಹರಿಜನ ಸದಸ್ಯೆ, ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘ, ಸಂಬಾಪುರ**

ಮೀನುಗಾರಿಕೆ ಇಲಾಖೆಯ ಮಾರ್ಗದರ್ಶನದಲ್ಲಿ ಸುಮಾರು 12,000 ಕಟ್ಲಾ ಮತ್ತು ರೋಹು ಮೀನು ಮರಿಗಳನ್ನು ಕೆರೆಗೆ ಬಿಡಲಾಯಿತು. ತಾಲೂಕು ಸಂಜೀವಿನಿ ಯೋಜನೆ ಅಧಿಕಾರಿ ಸಿದ್ದು ಸತ್ಯನ್ನವರ ಅಶ್ವಿನಿ ಪಾಟೀಲ, ಕೃಷಿ ಸಖಿಯರು ಹಾಗೂ ಪಶು ಸಖಿಯರು ನಿರಂತರ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡಿದರು. ಮಹಿಳೆಯರು ಪ್ರತಿದಿನ ಕೆರೆಯ ನಿರ್ವಹಣೆ, ಮೀನುಗಳಿಗೆ ಆಹಾರ ಒದಗಿಸುವುದು ಹಾಗೂ ಬೆಳವಣಿಗೆಯ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದರು. ಸುಮಾರು ಎಂಟು ರಿಂದ ಒಂಬತ್ತು ತಿಂಗಳ ನಿರಂತರ ಪರಿಶ್ರಮದ ನಂತರ ಕೆರೆಯಲ್ಲಿ ಬೆಳೆದ ಮೀನುಗಳನ್ನು ಕೊಯ್ಲು ಮಾಡಲಾಯಿತು. ಮೊದಲ ಹಂತದ ಕೊಯ್ಲಿನಲ್ಲಿ ಸುಮಾರು 60 ಕೆ.ಜಿ. ಮೀನುಗಳನ್ನು ಸಂಗ್ರಹಿಸಿ ಸ್ಥಳೀಯ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ?65 ದರದಲ್ಲಿ ಮಾರಾಟ ಮಾಡಲಾಯಿತು. ಮೀನುಗಳ ತೂಕ ಸರಾಸರಿ 700 ಗ್ರಾಂನಿಂದ 1 ಕೆ.ಜಿ.ವರೆಗೆ ಇತ್ತು. ಮೀನು ಮಾರಾಟದಿಂದ ದೊರೆತ ಆದಾಯ ಮಹಿಳೆಯರ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಲು ನೆರವಾಗಿದೆ.

ಆತ್ಮವಿಶ್ವಾಸದ ಹೊಸ ಅಧ್ಯಾಯ

**ಮತ್ಸ್ಯ ಸಂಜೀವಿನಿ ಯೋಜನೆ ಸಾಧನೆ ನಾಗಲೋಟ..**
**ಗ್ರಾಮೀಣ ಮಹಿಳೆಯರಿಗೆ ಪರ್ಯಾಯ ಜೀವನೋಪಾಯ ಕಲ್ಪಿಸುವ ಉದ್ದೇಶದಿಂದ ಆರಂಭವಾದ ಮತ್ಸ್ಯ ಸಂಜೀವಿನಿ ಯೋಜನೆ ಇಂದು ಗದಗ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣದ ಯಶಸ್ವಿ ಮಾದರಿಯಾಗಿ ಹೊರಹೊಮ್ಮಿದ್ದು, ಮಹಿಳೆಯರ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಗೌರವವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.**

ಮತ್ಸ್ಯ ಸಂಜೀವಿನಿ ಯೋಜನೆಯು ಕೇವಲ ಆದಾಯವನ್ನಷ್ಟೇ ನೀಡದೆ ಮಹಿಳೆಯರಲ್ಲಿ ಆತ್ಮವಿಶ್ವಾಸ, ನಾಯಕತ್ವ ಗುಣ, ಸ್ವಾವಲಂಬನೆ ಮತ್ತು ಉದ್ಯಮಶೀಲತೆಯ ಮನೋಭಾವವನ್ನು ಬೆಳೆಸಿದೆ. ಸಾರ್ವಜನಿಕ ಸಂಪನ್ಮೂಲವಾಗಿದ್ದ ಕೆರೆಯನ್ನು ಸಮುದಾಯದ ಆರ್ಥಿಕ ಅಭಿವೃದ್ಧಿಗೆ ಬಳಸಿಕೊಂಡಿರುವುದು ಗ್ರಾಮೀಣ ಅಭಿವೃದ್ಧಿಯ ಉತ್ತಮ ಉದಾಹರಣೆಯಾಗಿದೆ. ಇಂದು ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ತಮ್ಮದೇ ಆದ ಉದ್ಯಮವನ್ನು ಯಶಸ್ವಿಯಾಗಿ ನಡೆಸುತ್ತಿರುವ ಹೆಮ್ಮೆ ಹೊಂದಿದ್ದು, ಇವರ ಸಾಧನೆ ಜಿಲ್ಲೆಯ ಇತರ ಮಹಿಳೆಯರಿಗೂ ಸ್ಫೂರ್ತಿಯಾಗಿದೆ.

ಅಧಿಕಾರಿಗಳ ಮಾರ್ಗದರ್ಶನ ಜಿಲ್ಲಾ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ನಾಗರಾಜ್ ಚಳ್ಳಜ್ಜಿಮನೆ ಹಾಗೂ ಜಿಲ್ಲಾ ಪಂಚಾಯತ್ ವ್ಯವಸ್ಥಾಪಕರು (ಕೃಷಿ) ಮಡ್ಡೆಪ್ಪ ಮಲ್ಲಿಮಾರ್, ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕ ಸಿದ್ದು ಬಿ ಸತ್ಯಣ್ಣವರ ಅವರು ಯೋಜನೆಯ ಪ್ರತಿಯೊಂದು ಹಂತದಲ್ಲೂ ಸ್ವಸಹಾಯ ಸಂಘದ ಸದಸ್ಯರಿಗೆ ಅಗತ್ಯ ಮಾಹಿತಿ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿದರು. ಅವರ ನಿರಂತರ ಸಹಕಾರದಿಂದ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಂಡಿದೆ ಎಂದು ಸಂಘದ ಸದಸ್ಯರು ತಿಳಿಸಿದ್ದಾರೆ.

1ನೇ ಪುಟದಿಂದ....

# ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಏಕಿಷ್ಟು ಪೈಪೋಟಿ

ನಗರದ ಬೆಳವಣಿಗೆಗೆ ಭೂಮಿಯ ಬಳಕೆ, ಲೇಔಟ್ ಅನುಮೋದನೆಗಳು ಮತ್ತು ದೊಡ್ಡ ಪ್ರಮಾಣದ ಯೋಜನೆಗಳ ಅನುಮೋದನೆಯು ಈ ಇಲಾಖೆಯ ಅಧೀನದಲ್ಲಿರುತ್ತದೆ. ರಿಯಲ್ ಎಸ್ಟೇಟ್ ಮತ್ತು ಮೂಲಸೌಕರ್ಯ ವಲಯದಲ್ಲಿ ಈ ಇಲಾಖೆಯ ಪಾತ್ರ ನಿರ್ಣಾಯಕವಾಗಿರುತ್ತದೆ, ಇದು ಸಹಜವಾಗಿಯೇ ಹಲವರ ಆಸಕ್ತಿಗೆ ಕಾರಣವಾಗುತ್ತದೆ. ಹಿಂದಿನಿಂದಲೂ ಮುಖ್ಯಮಂತ್ರಿಗಳು ಅಥವಾ ಹಿರಿಯ ಸಚಿವರೇ ಈ ಖಾತೆಯನ್ನು ತಮ ಬಳಿಯೇ ಇಟ್ಟುಕೊಳ್ಳುವ ಸಂಪ್ರದಾಯವಿತ್ತು. ಎಸ್.ಎಂ.ಕೃಷ್ಣ ಅವರ ಕಾಲದಿಂದ ಹಿಡಿದು ಇತ್ತೀಚಿನ ಸರ್ಕಾರಗಳವರೆಗೆ, ನಗರದ ಭವಿಷ್ಯ ರೂಪಿಸುವ ಜವಾಬ್ದಾರಿ ಈ ಖಾತೆಗೆ ಇರುವುದರಿಂದ, ಇದು ಸರ್ಕಾರದ ಅತ್ಯಂತ ಹೈ-ಪ್ರೊಫೈಲ್ ಖಾತೆಯಾಗಿ ಉಳಿದಿದೆ. ನಗರ ಅಭಿವೃದ್ಧಿ ಇಲಾಖೆಯು ಕೇವಲ ಒಂದು ಆಡಳಿತಾತಕ ವಿಭಾಗವಲ್ಲ, ಇದು ಬೆಂಗಳೂ-ರಿನ ಭವಿಷ್ಯವನ್ನು ನಿರ್ಧರಿಸುವ ಶಕ್ತಿಯ ಕೇಂದ್ರವಾಗಿದೆ. ಈ ಇಲಾಖೆಯು ರಾಜಕೀಯ ಅಧಿಕಾರ, ಆರ್ಥಿಕ ನಿರ್ವಹಣೆ ಮತ್ತು ಸಾರ್ವಜನಿಕ ಗೋಚರತೆಯನ್ನು ಒಟ್ಟಿಗೆ ಹೊಂದಿರುವುದರಿಂದ, ಯಾವುದೇ ನಾಯಕನಿಗೆ ಇದು ಅತ್ಯಂತ ಅಪೇಕ್ಷಣೀಯವಾದ ಖಾತೆಯಾಗಿರುತ್ತದೆ. ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ, ಈ ಖಾತೆಯನ್ನು ಪಡೆಯುವವರು ನಗರದ ಮೂಲಭೂತ ಸಮಸ್ಯೆಗಳನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ಅವರ ಮುಂದಿನ ರಾಜಕೀಯ ಭವಿಷ್ಯವನ್ನು ನಿರ್ಧರಿಸುತ್ತದೆ. ರಾಮಲಿಂಗಾ ರೆಡ್ಡಿ ಅವರಂತಹ ಹಿರಿಯ ನಾಯಕರು ಈ ಖಾತೆಗಾಗಿ ಅಸಮಾಧಾನ ವ್ಯಕ್ತಪಡಿಸಿದ್ದು, ಈ ಖಾತೆ ಎಷ್ಟು ಪ್ರಭಾವಿ ಎಂಬುವುದಕ್ಕೆ ಸಾಕ್ಷಿಯಾಗಿದೆ. ಪ್ರಸ್ತುತ, ಕೃಷ್ಣ ಬೈರೇಗೌಡ ಅವರಿಗೆ ಈ ಜವಾಬ್ದಾರಿ ನೀಡಲಾಗಿದ್ದು, ಡಿಕೆ ಶಿವಕುಮಾರ್ ಅವರು ಬಿಡಿಎಯಂತಹ ಪ್ರಮುಖ ಸಂಸ್ಥೆಗಳನ್ನು ತಮ ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ಇದು ಆಡಳಿತದಲ್ಲಿ ಅಧಿಕಾರದ ಹಂಚಿಕೆಗೆ ಸಂಬಂಧಿಸಿದ ಹೊಸ ಸಂಕೀರ್ಣತೆಯನ್ನು ಸೃಷ್ಟಿಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಬೆಂಗಳೂರು ಕೇವಲ ಒಂದು ನಗರವಲ್ಲ, ಅದೊಂದು ಆರ್ಥಿಕ ಸಾಮ್ರಾಜ್ಯ. ಆ ಸಾಮ್ರಾಜ್ಯವನ್ನು ಆಳುವ ಕೀಲಿಕೈ ಕೈವಶ ಮಾಡಿಕೊಳ್ಳಲು ಪ್ರತಿಯೊಬ್ಬ ಸಚಿವರೂ ಪ್ರಯತ್ನಿಸುತಾರೆ.

# ಪರಿಸರ ಸಂರಕ್ಷಣೆಯೇ ಭಾರತದ ಯಶಸ್ಸಿಗೆ ಕಾರಣ : ಪ್ರಧಾನಿ ಮೋದಿ

ನವದೆಹಲಿ: ವಿಶ್ವ ಪರಿಸರ ದಿನದಂದು, ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ದಶಕದಲ್ಲಿ ಸರ್ಕಾರ ಕೈಗೊಂಡ ವಿವಿಧ ಪ್ರಯತ್ನಗಳನ್ನು ಎತ್ತಿ ತೋರಿಸಿದರು, ಅವು ಹಸಿರು ಹೊದಿಕೆಯನ್ನು ವಿಸ್ತರಿಸುವುದು ಮತ್ತು ಹಲವಾರು ಪ್ರಾಣಿಗಳ ಜನಸಂಖ್ಯೆಯಲ್ಲಿನ ಹೆಚ್ಚಳದಂತಹ ಭಾರತದ ಪ್ರಮುಖ ಯಶಸ್ಸಿಗೆ ಕಾರಣವಾಗಿವೆ ಎಂದು ತಿಳಿಸಿದ್ದಾರೆ.

ಸಾಮೂಹಿಕ ಪ್ರಯತ್ನಗಳು, ನೀತಿಗಳು, ವಿಜ್ಞಾನ ಮತ್ತು ನಾವೀನ್ಯತೆಯಲ್ಲಿ ನಂಬಿಕೆ ಪರಿಸರವನ್ನು ಹೇಗೆ ಸುಧಾ-ರಿಸಬಹುದು ಎಂಬುದನ್ನು ತೋರಿಸಿದ್ದಕ್ಕಾಗಿ ಪ್ರಧಾನಿ



ನಾಗರಿಕರನ್ನು ಶ್ಲಾಘಿಸಿದರು.

ವಿಶ್ವ ಪರಿಸರ ದಿನದಂದು ಎಲ್ಲರಿಗೂ ಶುಭಾಶಯಗಳು. ಪರಿಸರ ಸಂರಕ್ಷಣೆಯ ಬಗ್ಗೆ ಉತ್ಸುಕರಾಗಿರುವ ಎಲ್ಲ-ರಿಗೂ ನಾನು ಶ್ಲಾಘಿಸಲು ಬಯಸುತ್ತೇನೆ. ಎಂದು ಅವರು ಎಕ್?ಸ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.ನಮ್ಮ ಪರಿಸರವನ್ನು ರಕ್ಷಿಸುವ ಮತ್ತು ಸುಸ್ಥಿರ ಬೆಳವಣಿಗೆಯನ್ನು ಹೆಚ್ಚಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸಲು ಈ ದಿನವು ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಮೋದಿ ಒತ್ತಿ ಹೇಳಿದರು.ಕಳೆದ ದಶಕದಲ್ಲಿ ಈ ನಿಟ್ಟಿನಲ್ಲಿ ತಮ್ಮ ಸರ್ಕಾರದಿಂದ ಹಲವಾರು ಉಪಕ್ರಮಗಳು ಕಂಡುಬಂದಿವೆ ಎಂದು ಅವರು ವಿವರಿಸಿದರು.

ಭಾರತದ ಕೆಲವು ಪ್ರಮುಖ ಯಶಸ್ಸುಗಳಲ್ಲಿ ಹಸಿರು ಹೊದಿಕೆಯನ್ನು ವಿಸ್ತರಿಸುವುದು ಮತ್ತು ಹಲವಾರು ಪ್ರಾಣಿಗಳ ಜನಸಂಖ್ಯೆಯಲ್ಲಿನ ಏರಿಕೆ ಸೇರಿವೆ ಎಂದು ಅವರು ಹೇಳಿದರು. ಜೂನ್ 5 ರಂದು ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮೂಡಿಸಲು ಮತ್ತು ಕ್ರಮವನ್ನು ಪ್ರೋತ್ಸಾಹಿಸಲು ವಿಶ್ವ ಪರಿಸರ ದಿನವನ್ನು ವಾರ್ಷಿಕವಾಗಿ ಆಚರಿಸಲಾಗುತ್ತದೆ.1973 ರಲ್ಲಿ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ ಸ್ಥಾಪಿಸಿದ ಇದು, ಪರಿಸರ ಸಮಸ್ಯೆಗಳ ಕುರಿತು ಸಾರ್ವಜನಿಕ ಸಂಪರ್ಕಕ್ಕಾಗಿ ಅತಿದೊಡ್ಡ ಜಾಗತಿಕ ವೇದಿಕೆಯಾಗಿದ್ದು, ಇದನ್ನು ವಿಶ್ವದಾದ್ಯಂತ ಲಕ್ಷಾಂತರ ಜನರು ಆಚರಿಸುತ್ತಾರೆ.2026 ರಲ್ಲಿ, ಈ ಕಾರ್ಯಕ್ರಮವನ್ನು ಅಜೆರ್ಬೈಜಾನ್ ಆಯೋಜಿಸುತ್ತದೆ.ಈ ಆಚರಣೆಯು ಜಾಗತಿಕವಾಗಿ ಪರಿಸರ ಕಾರಣಗಳನ್ನು ಬೆಂಬಲಿಸುವ ಅತ್ಯಂತ ವ್ಯಾಪಕವಾದ ವೇದಿಕೆಗಳಲ್ಲಿ ಒಂದಾಗಿದೆ.

# ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ : ಡಿಕೆಶಿ ಟೀಮ್‌ನ ಮೊದಲ ವಿಕೆಟ್ ಪತನ



ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ತಮ ಸಂಪುಟದ ಸಹೋದ್ಯೋಗಿಗಳಿಗೆ ಖಾತೆ ಹಂಚಿಕೆ ಮಾಡಿದ ಬೆನ್ನಲ್ಲೇ ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದಾರೆ. ಸರ್ಕಾರ ರಚನೆಯಾದ ಮೂರು ದಿನ ತುಂಬುವ ಮೊದಲೇ ಸಚಿವ ಸ್ಥಾನಕ್ಕೆ ರಾಮಲಿಂಗಾ ರೆಡ್ಡಿ ರಾಜೀನಾಮೆ ನೀಡಿರುವುದು ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರಕ್ಕೆ ಮುಜುಗರ ಉಂಟಾಗಿದೆ. ಜಲಸಂಪನೂಲ ಖಾತೆ ನೀಡಿರುವುದಕ್ಕೆ ತೀವ್ರ ಅಸಮಾಧಾನಗೊಂಡಿರುವ ರಾಮಲಿಂಗಾರೆಡ್ಡಿ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಖಾತೆಯ ನಿರೀಕ್ಷೆಯಲ್ಲಿದ್ದ ರಾಮಲಿಂಗಾ ರೆಡ್ಡಿ ಅವ-ರಿಗೆ ಜಲಸಂಪನೂಲ ಖಾತೆ ನೀಡಿರುವುದು ಅವರ ಬೇಸರಕ್ಕೆ ಪ್ರಮುಖ ಕಾರಣವಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವ-ರಿಗೆ ರಾಮಲಿಂಗಾ ರೆಡ್ಡಿ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ರಾಜೀನಾಮೆ ಪತ್ರದಲ್ಲಿ ನನಗೆ ತಮ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಿದ್ದಕ್ಕೆ ತಮಗೂ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಧನ್ಯವಾದಗಳು ಎಂದು ಹೇಳಿದ್ದಾರೆ.

ಆತಸಾಕ್ಷಿಗೆ ವಿರುದ್ದವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗದ ಕಾರಣ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದಾಗಿ ತಿಳಿಸಿರುವ ಅವರು, ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿದ್ದಾರೆ. ಶಾಸಕನಾಗಿ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿ ಮುಂದುವರೆಉತ್ತೇನೆ ಎಂದು ಮುಖ್ಯಮಂತ್ರಿಗಳಿಗೆ ರವಾನಿಸಿರುವ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ. ಖಾತೆ ಹಂಚಿಕೆಗೂ ಮುನ್ನ ರಾಮಲಿಂಗಾರೆಡ್ಡಿ ಅವರು ಅಸಮಾಧಾನ ಹೊರಹಾಕಿದ್ದರು. ಇದಾದ ನಂತರ ರಾತ್ರಿ ಮುಖ್ಯಮಂತ್ರಿ ಅವರು ರಾಮಲಿಂಗಾರೆಡ್ಡಿ ಅವರೊಂದಿಗೆ ಸಮಾಲೋಚನೆ ನಡೆಸಿ ಸಮಾಧಾನಪಡಿಸಿದ್ದರು ಎನ್ನಲಾಗಿದೆ.

ಆನಂತರವಷ್ಟೇ ಸಚಿವರಿಗೆ ಖಾತೆ ಹಂಚಿಕೆ ಮಾಡಿ ಅಧಿಕೃತವಾಗಿ ಪ್ರಕಟಿಸಲಾಗಿ-ತ್ತು. ಆದರೆ ಇಂದು ಬೆಳಗ್ಗೆ ರಾಮಲಿಂಗಾರೆಡ್ಡಿ ಅವರು ತಮ ಅಸಮಾಧಾನ ವ್ಯಕ್ತಪಡಿಸಿ ಸಚಿವ ಸ್ಥಾನದಿಂದ ದೂರ ಉಳಿಯಲು ನಿರ್ಧರಿಸಿ ರಾಜೀನಾಮೆ ಪತ್ರವನ್ನು ನೀಡಿದ್ದಾರೆ.

ಕಳೆದ 2023ರಲ್ಲಿ ಸಿದ್ದರಾಮಯ್ಯನವರ ಸಂಪುಟದಲ್ಲಿ ಸಚಿವರಾಗಿದ್ದಾಗಲೂ ಬೆಂಗಳೂರು ಅಭಿವೃದ್ಧಿ ಖಾತೆಗೆ ರಾಮಲಿಂಗಾ ರೆಡ್ಡಿ ಆಸಕ್ತಿ ತೋರಿದ್ದರು. ಆ ಸಂದರ್ಭದಲ್ಲಿ ಮನವೊಲಿಸಿ ಸಾರಿಗೆ ಖಾತೆಯನ್ನು ನೀಡಲಾಗಿತ್ತು. ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಕಾಂಗ್ರೆಸ್ ಪಕ್ಷ ಬಿಡುವುದಿಲ್ಲ. ಶಾಸಕನಾಗಿ ಮುಂದುವರೆಯುತ್ತೇನೆ. ನಾನಾಗಿಯೇ ಸಚಿವ ಸ್ಥಾನವನ್ನು ಕೇಳಿರಲಿಲ್ಲ. ಬೆಂಗಳೂರು ಅಭಿವೃದ್ಧಿ ಖಾತೆಯನ್ನು ನೀಡುವುದಾಗಿ ಭರವಸೆ ನೀಡಿದ್ದರು. ಆ ಭರವಸೆ ಈಡೇರಿಲ್ಲ ಎಂದು ಅವರು ತಿಳಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ : ಸಾರಿಗೆ ಸಂಸ್ಥೆ ಆದಾಯ ಖೋತಾ



ಬೆಂಗಳೂರು: ರಾಜ್ಯದ ಎಲ್ಲಾ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ರಾಜ್ಯ ಸರ್ಕಾರದ ನಿರ್ಧಾರವು ವಿದ್ಯಾರ್ಥಿಗಳಿಗೆ ಆರ್ಥಿಕ ನೆರವಾಗಲಿದ್ದರೂ, ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ಆದಾಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಪ್ರಸ್ತುತ ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಪ್ರತಿವರ್ಷ ಸುಮಾರು ಏಳು ಲಕ್ಷ ವಿದ್ಯಾರ್ಥಿಗಳಿಂದ ಬಸ್ ಪಾಸ್ ಶುಲ್ಕ ರೂಪದಲ್ಲಿ ಆದಾಯ ಗಳಿಸುತ್ತಿವೆ. ಹೊಸ ಯೋಜನೆ ಜಾರಿಗೆ ಬಂದರೆ ಈ ಆದ-ಾಯ ಸಂಪೂರ್ಣವಾಗಿ ನಿಲ್ಲಲಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಆತಂಕ ಹೊರಹಾಕಿದ್ದಾರೆ.ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಂದ ಪ್ರತಿವರ್ಷ ಸುಮಾರು 9 ಲಕ್ಷ ವಿದ್ಯಾರ್ಥಿ ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತದೆ. ಇದರಲ್ಲಿ ಸುಮಾರು 7 ಲಕ್ಷ ವಿದ್ಯಾರ್ಥಿಗಳು ಪಾಸ್‌ಗೆ ಹಣ ಪಾವತಿಸುತ್ತಾರೆ.

ಉಳಿದವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಾಗಿದ್ದು, ಅವರು ಈಗಾಗಲೇ ಉಚಿತ ಪ್ರಯಾಣ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಒಂದು ವಿದ್ಯಾರ್ಥಿ ಬಸ್ ಪಾಸ್‌ಗೆ ಸರಾಸರಿ ವರ್ಷಕ್ಕೆ 1,000 ರೂಪಾಯಿ ವೆಚ್ಚವಾಗುತ್ತದೆ. ಹೊಸ ಯೋಜನೆಯಿಂದ ಈ ಏಳು ಲಕ್ಷ ವಿದ್ಯಾರ್ಥಿಗಳಿಂದ ಬರುತ್ತಿದ್ದ ಆದಾಯ ಸಾರಿಗೆ ನಿಗಮಗಳಿಗೆ ದೊರೆಯುವುದಿಲ್ಲ ಎಂದು ತಿಳಿಸಿದ್ದಾರೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಅಂಕಿ-ಅಂಶಗಳ ಪ್ರಕಾರ, 2025-26ನೇ ಸಾಲಿನಲ್ಲಿ ಒಟ್ಟು 1.78 ಲಕ್ಷ ವಿದ್ಯಾರ್ಥಿ ಪಾಸ್‌ಗಳನ್ನು ವಿತರಿಸಲಾಗಿದೆ. ಇದರಲ್ಲಿ 1.41 ಲಕ್ಷ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ, ಸುಮಾರು 31 ಸಾವಿರ ಎಸ್‌ಸಿ ವಿದ್ಯಾರ್ಥಿಗಳಿಗೆ ಹಾಗೂ ಸುಮಾರು 5 ಸಾವಿರ ಎಸ್‌ಟಿ ವಿದ್ಯಾರ್ಥಿಗಳಿಗೆ ಪಾಸ್‌ಗಳನ್ನು ನೀಡಲಾಗಿದೆ ಎಂದು ತಿಳಿದುಬಂದಿದೆ.

**ವಿದ್ಯಾರ್ಥಿಗಳಿಗೆ ಮಹತ್ವದ ನೆರವು :**

ಉಚಿತ ಬಸ್ ಪಾಸ್ ಯೋಜನೆಯಿಂದ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳ ಕುಟುಂಬಗಳ ಮೇಲಿನ ಸಾರಿಗೆ ವೆಚ್ಚದ ಹೊರೆ ಗಣನೀಯವಾಗಿ ಕಡಿಮೆಯಾಗಲಿದೆ. ವಿಶೇಷವಾಗಿ ಕಡಿಮೆ ಮತ್ತು ಮಧ್ಯಮ ಆದಾಯದ ಕುಟುಂಬಗಳಿಗೆ ಇದು ಹೆಚ್ಚಿನ ನೆರವಾಗಲಿದೆ. ಪ್ರತಿವರ್ಷದ ಪ್ರಯಾಣ ವೆಚ್ಚವನ್ನು ಸಂಪೂರ್ಣವಾಗಿ ತೆಗೆದುಹಾಕುವುದರಿಂದ ಶಿಕ್ಷಣದ ಲಭ್ಯತೆ ಹೆಚ್ಚುವುದು, ವಿದ್ಯಾರ್ಥಿಗಳ ಹಾಜರಾತಿ ಸುಧಾರಿಸುವುದು, ಶಾಲೆ ಹಾಗೂ ಕಾಲೇಜು ತೊರೆಯುವವರ ಸಂಖ್ಯೆ ಕಡಿಮೆಯಾಗುವುದು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಸಿಗುವುದು ಎಂಬ ನಿರೀಕ್ಷೆ ಇದೆ. ಶಿಕ್ಷಣವನ್ನು ಹೆಚ್ಚು ಸುಲಭವಾಗಿ ಮತ್ತು ಎಲ್ಲರಿಗೂ ಲಭ್ಯವಾಗಿಸುವ ಉದ್ದೇಶದಿಂದಲೇ ಈ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಸರ್ಕಾರ ತಿಳಿಸಿದೆ.

**ಶಕ್ತಿ ಯೋಜನೆ ನಡುವೆಯೇ ಹೊಸ ಸವಾಲು :**

ಈ ಘೋಷಣೆ ಈಗಾಗಲೇ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಸಾರಿಗೆ ನಿಗಮಗಳಿಗೆ ಮತ್ತೊಂದು ಸವಾಲಾಗಿ ಪರಿಣಮಿಸಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸುವ ಶಕ್ತಿ ಯೋಜನೆಯಿಂದ ನಾಲ್ಕು ಸಾರಿಗೆ ನಿಗಮಗಳ ಮೇಲೆ ಭಾರೀ ಆರ್ಥಿಕ ಒತ್ತಡ ಉಂಟಾಗಿದೆ.

2023ರ ಜೂನ್ 11ರಂದು ಶಕ್ತಿ ಯೋಜನೆ ಆರಂಭವಾದ ಬಳಿಕ ಅದರ ಅನುಷ್ಠಾನಕ್ಕಾಗಿ ನಾಲ್ಕು ನಿಗಮಗಳು ಒಟ್ಟಾರೆ ಸುಮಾರು 17,000 ಕೋಟಿ ರೂಪಾಯಿ ವೆಚ್ಚ ಮಾಡಿವೆ. ಸರ್ಕಾರ ಇದುವರೆಗೆ ಸುಮಾರು 13,000 ಕೋಟಿ ರೂಪಾಯಿ ಮರುಪಾವತಿ ಮಾಡಿದ್ದು, 2026ರ ಫೆಬ್ರವರಿ 28ರ ವೇಳೆಗೆ ಸುಮಾರು 4,000 ಕೋಟಿ ರೂಪಾಯಿ ಬಾಕಿ ಉಳಿದಿದೆ.

ಇದೀಗ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತ-ರಿಸಿರುವುದರಿಂದ ರಾಜ್ಯ ಸರ್ಕಾರದಿಂದ ಸಮರ್ಪಕ ಮರುಪಾವತಿ ದೊರೆಯದಿದ್ದರೆ ಸಾರಿಗೆ ನಿಗಮಗಳ ಆರ್ಥಿಕ ಸ್ಥಿತಿಯ ಮೇಲೆ ಮತ್ತಷ್ಟು ಒತ್ತಡ ಬೀಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

# ಬಿಜೆಪಿಯಿಂದ ಅಧಿಕೃತವಾಗಿ ದೂರವಾದ ಅಣ್ಣಾಮಲೈ, ಹೊಸ ಪಕ್ಷ ಕಟ್ಟಲು ತಯಾರಿ



ನವದೆಹಲಿ: ಭಾರತೀಯ ಜನತಾ ಪಕ್ಷ (ಬಿಜೆಪಿ) ರಾಷ್ಟ್ರಾಧ್ಯಕ್ಷ ನಿತಿನ್ ನಬೀನ್ ಅವರು ತಮಿಳುನಾಡು ಬಿಜೆಪಿ ಘಟಕದ ಮುಖ್ಯಸ್ಥ ಕೆ. ಅಣ್ಣಾಮಲೈ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಇದರೊಂದಿಗೆ ಅಣ್ಣಾಮಲೈ ಅವರ ಬಿಜೆಪಿಯೊಂದಿಗಿನ ದೀರ್ಘಕಾಲದ ಸಂಬಂಧವು ಇಂದು ಅಧಿಕೃತವಾಗಿ ಕೊನೆಗೊಂಡಿದೆ.

ತಮಿಳುನಾಡು ರಾಜ-ಕೀಯದಲ್ಲಿ ಹಲವು ದಿನಗಳಿಂದ ತೀವ್ರ ಊಹಾಪೋಹಗಳು ಹರಿದಾಡುತ್ತಿದ್ದ ವಿಷಯಕ್ಕೆ ಅಂತಿಮ ತೆರೆ ಬಿದ್ದಿದೆ. ಹಿರಿಯ ನಾಯಕ ಕೆ. ಅಣ್ಣಾಮಲೈ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಪಕ್ಷದ ಹೈಕಮಾಂಡ್ ದೃಢಪಡಿಸಿದೆ.

ರಾಜೀನಾಮೆ ಅಂಗೀಕೃತವಾದ ಬೆನ್ನಲ್ಲೇ ಅಣ್ಣಾಮಲೈ ಅವರು ಮಧ್ಯಾಹ್ನ ಪತ್ರಿಕಾಗೋಷ್ಠಿ ನಡೆಸಿ ತಮ ಭವಿಷ್ಯದ ಯೋಜನೆಗಳನ್ನು ಪ್ರಕಟಿಸಲಿದ್ದಾರೆ. ಈ ಸಭೆಯಲ್ಲಿ ಅವರು ತಮ ಮುಂದಿನ ರಾಜಕೀಯ ಪಥ-'ವನ್ನು ಸ್ಪಷ್ಟಪಡಿಸುವ ಸಾಧ್ಯತೆ ಇದೆ. ಅಣ್ಣಾಮಲೈ ಅವರು ತಮಿಳುನಾಡು ಬಿಜೆಪಿಯನ್ನು ಬಲಪಡಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಅವರ ನಾಯಕತ್ವದಲ್ಲಿ ಪಕ್ಷವು ರಾಜ್ಯದಲ್ಲಿ ಗಣನೀಯ ಬೆಳವಣಿಗೆ ಕಂಡಿತ್ತು. ಆದರೆ ಇತ್ತೀಚಿನ ತಿಂಗಳುಗಳಲ್ಲಿ ಪಕ್ಷದ ಒಳಗಿನ ಮತ್ತು ಹೈಕಮಾಂಡ್‌ನೊಂದಿಗಿನ ಅಸಮಾಧಾನಗಳು ಹೆಚ್ಚಾಗಿದ್ದವು ಎಂದು ಮೂಲಗಳು ತಿಳಿಸಿವೆ.

ಈ ರಾಜೀನಾಮೆಯು ತಮಿಳುನಾಡು ರಾಜಕೀಯದಲ್ಲಿ ದೊಡ್ಡ ಭೂಕಂಪವನ್ನು ಸೃಷ್ಟಿಸಿದೆ. ಬಿಜೆಪಿ ನಾಯಕರು ಈ ಬಗ್ಗೆ ಇನ್ನೂ ವಿವರವಾದ ಪ್ರತಿಕ್ರಿಯೆ ನೀಡಿಲ್ಲ. ಆದರೆ ಅಣ್ಣಾಮಲೈ ಅವರ ರಾಜೀನಾಮೆಯು ಪಕ್ಷದ ತಮಿಳುನಾಡು ಘಟಕದಲ್ಲಿ ಗೊಂದಲಕ್ಕೆ ಕಾರಣವಾಗಬಹುದು ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಅಣ್ಣಾಮಲೈ ಅವರು ಐಪಿ-ಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ನಂತರ ರಾಜಕೀಯಕ್ಕೆ ಬಂದವರು. ಅವರ ಆಕ್ರಮಣಕಾರಿ ನಾಯಕತ್ವ ಮತ್ತು ನೇರ ಮಾತುಗಾರಿಕೆಗೆ ರಾಜ್ಯದಲ್ಲಿ ದೊಡ್ಡ ಬೆಂಬಲವಿದೆ. ರಾಜೀನಾಮೆಯ ನಂತರ ಅವರು ಸ್ವತಂತ್ರವಾಗಿ ಅಥವಾ ಬೇರೆ ಯಾವುದೇ ಪಕ್ಷದೊಂದಿಗೆ ಸೇರಿ ರಾಜ-ಕೀಯವನ್ನು ಮುಂದುವರಿಸುವ ಸಾಧ್ಯತೆ ಇದೆ ಎಂದು ಊಹಿಸಲಾಗುತ್ತಿದೆ.

ಈ ಬೆಳವಣಿಗೆಯು 2026ರ ತಮಿಳುನಾಡು ರಾಜಕೀಯದಲ್ಲಿ ಹೊಸ ಸಮೀಕರಣಗಳನ್ನು ರೂಪಿಸುವ ಸಾಧ್ಯತೆ ಇದೆ. ಅಣ್ಣಾಮಲೈ ಅವರ ರಾಜೀನಾಮೆಗೆ ಕಾರಣ?: ಬಿಜೆಪಿಯು ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಅಣ್ಣಾಡಿ-ಎಂಕೆ ಜತೆ ಮೈತ್ರಿ ಮಾಡಿಕೊಳ್ಳುವುದು ಅಣ್ಣಾಮಲೈಗೆ ಇಷ್ಟವಿರಲಿಲ್ಲ. ಕಳೆದ ಚುನಾವಣೆಯಲ್ಲಿ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸಬೇಕು ಎಂಬುದು ಅವರ ಆಶಯವಾಗಿತ್ತು. ಆದರೂ ಬಿಜೆಪಿ-ಅಣ್ಣಾ ಡಿಎಂಕೆ ಮೈತ್ರಿ ಮಾಡಿಕೊಂಡಿತು. ಅಲ್ಲಿಂದಲೇ ಬಿರುಕು ಆರಂಭವಾಯಿತು. ನಂತರ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿದರು. ಪಕ್ಷದಲ್ಲಿ ಅವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ.

ಇತ್ತೀಚೆಗೆ ಕೇಂದ್ರದ ತ್ರಿಭಾಷಾ ಸೂತ್ರವನ್ನೂ ಅವರು ವಿರೋಧಿಸಿ, ಬಿಜೆಪೆ ಜೊತೆಗಿನ ಮುನಿಸನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದರು. ಅಣ್ಣಾಮಲೈ ಸದ್ಯ ರಾಜಕೀಯೇತರ ಚಳವಳಿಯೊಂದನ್ನು ಆರಂಭಿಸಲಿದ್ದಾರೆ. ರಾಷ್ಟ್ರೀಯತೆ ಮತ್ತು ತಮಿಳು ತತ್ವಶಾಸ್ತ್ರದ ಸಿದ್ಧಾಂತದ ಮೇಲೆ ಅದು ಕೆಲಸ ಮಾಡಲಿದೆ. ಮುಂದೆ ಅದನ್ನೇ ರಾಜಕೀಯ ಪಕ್ಷವಾಗಿ ಪರಿವರ್ತಿಸಲಿದ್ದಾರೆ ಎನ್ನಲಾಗಿದೆ.

# ಶೇ.50 ರಿಯಾಯಿತಿಯಲ್ಲಿ ದಂಡ ಪಾವತಿಸಲು ವಾಹನ ಸವಾರರಿಗೆ ಮತ್ತೊಂದು ಅವಕಾಶ

ಬೆಂಗಳೂರ; ರಾಜ್ಯದಲ್ಲಿ ನೂತನವಾಗಿ ರಚನೆಯಾಗಿರುವ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ವಾಹನ ಸವಾರರಿಗೆ ಸಿಹಿಸುದ್ದಿ ನೀಡಿದೆ. ಈ ಹಿಂದೆ ಜಾರಿಯಲ್ಲಿದ್ದ ಶೇ.50ರಷ್ಟು ಸಂಚಾರ ದಂಡ ರಿಯಾಯಿತಿಯನ್ನು ಮತ್ತೆ ಪುನಃಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರವು ಈ ಬಗ್ಗೆ ಮಹತ್ವದ ಘೋಷಣೆ ಮಾಡಿ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರದ ನಿರ್ಧಾರದ ಪ್ರಕಾರ, ವಾಹನ ಸವಾರರು ಬಾಕಿ ಉಳಿದಿರುವ ಸಂಚಾರ ದಂಡದ ಮೇಲೆ ಶೇ.50 ರಿಯಾಯಿತಿ ಪಡೆದುಕೊಳ್ಳಲು ಮತ್ತೆ ಅವಕಾಶ ದೊರೆತಿದೆ. ಈ ಹಿಂದೆ ಸರ್ಕಾರ ನೀಡಿದ್ದ ಈ ರಿಯಾಯಿತಿಗೆ ವಾಹನ ಸವಾರರಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆ ಯಶಸ್ಸಿನ ಹಿನ್ನೆಲೆಯಲ್ಲಿ ಮತ್ತೊಮೆ ಈ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಸರ್ಕಾರ ಹೇಳಿದೆ.



ಈ ರಿಯಾಯಿತಿ ಯೋಜನೆಯಡಿ ವಾಹನ ಸವಾರರು ತಮ ಬಾಕಿ ದಂಡವನ್ನು ಶೇ.50 ರಿಯಾಯಿತಿಯೊಂದಿಗೆ ಪಾವತಿಸಲು 20 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ದಂಡ ಪಾವತಿಸಿದರೆ ಅರ್ಧದಷ್ಟು ಮೊತ್ತವನ್ನು ಉಳಿಸಿಕೊಳ್ಳಬಹುದು. ಇದು ವಾಹನ ಸವಾರರಿಗೆ ದೊಡ್ಡ ಆರ್ಥಿಕ ಸಹಾಯವಾಗುವ ನಿರೀಕ್ಷೆ ಇದೆ.ಸಾರಿಗೆ ಇಲಾಖೆಯ ಮೂಲಗಳ ಪ್ರಕಾರ, ರಾಜ್ಯದಲ್ಲಿ ಲಕ್ಷಾಂತರ ವಾಹನ ಸವಾರರು ವಿವಿಧ ಕಾರಣಗಳಿಂದ ಸಂಚಾರ ನಿಯಮ ಉಲ್ಲಂಘನೆಗೆ ದಂಡ ಬಾಕಿ ಉಳಿಸಿಕೊಂಡಿದ್ದಾರೆ. ಹಿಂದಿನ ರಿಯಾಯಿತಿ ಯೋಜನೆಯಲ್ಲಿ ಸಾವಿರಾರು ಜನರು ಲಾಭ ಪಡೆದಿದ್ದರು. ಈ ಬಾರಿ ಇನ್ನಷ್ಟು ಜನರು ಇದರ ಸದುಪಯೋಗ ಪಡೆಯುವರು ಎಂದು ಅಂ-ದಾಜಿಸಲಾಗಿದೆ. ಈ ನಿರ್ಧಾರವು ವಿಶೇಷವಾಗಿ ಸಾಮಾನ್ಯ ಮಧ್ಯಮ ವರ್ಗದ ವಾಹನ ಸವಾರರಿಗೆ ನೆರವಾಗಲಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆ ಅನ್ವಯವಾಗುತ್ತದೆ. ದಂಡ ಪಾವತಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ವಿಧಾನಗಳನ್ನು ಬಳಸಬಹುದು. ಪರಿವಹಣೆ ಇಲಾಖೆಯ ವೆಬ್‌ಸೈಟ್ ಅಥವಾ ಪರಿವಹಣೆ ಕಚೇರಿಗಳ ಮೂಲಕ ದಂಡ ಪಾವತಿಸಬಹುದು.

ಸಾರಿಗೆ ಸಚಿವರು ಈ ಬಗ್ಗೆ ಮಾತನಾಡುತ್ತಾ, ವಾಹನ ಸವಾರರ ಸಮಸ್ಯೆಗಳನ್ನು ಗಮನಿಸಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ರಿಯಾಯಿತಿ ಅವಧಿಯಲ್ಲಿ ಎಲ್ಲರೂ ದಂಡ ಪಾವತಿಸಿ ತೊಂದರೆಗಳಿಂದ ಮುಕ್ತರಾಗುವಂತೆ ಮನವಿ ಮಾಡಿದ್ದಾರೆ. ಈ ಘೋಷಣೆಯಿಂದಾಗಿ ರಾಜ್ಯದಲ್ಲಿ ಸಂಚಾರ ದಂಡ ಸಂಬಂಧಿತ ದಾಖಲೆಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇದೆ. ಜೊತೆಗೆ ವಾಹನ ಸವಾರರು ನಿಯಮಗಳನ್ನು ಪಾಲಿಸುವತ್ತ ಹೆಚ್ಚು ಗಮನ ಹ-ರಿಸುವರು ಎಂದು ನಿರೀಕ್ಷಿಸಲಾಗಿದೆ.ವಾಹನ ಸವಾರರು ತಮ ವಾಹನ ಸಂಖ್ಯೆ ಅಥವಾ ಆಧಾರ್ ಸಂಖ್ಯೆ ಬಳಸಿ ಆನ್‌ಲೈನ್‌ನಲ್ಲಿ ದಂಡ ಪರಿಶೀಲಿಸಿ, ರಿಯಾಯಿತಿ ಸದುಪಯೋಗಪಡಿಸಿಕೊಳ್ಳುವಂತೆ ಸರ್ಕಾರ ಸಲಹೆ ನೀಡಿದೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಈ ಪ್ರಪಂಚದಲ್ಲಿ ಅತ್ಯಾಶ್ಚರ್ಯಕರವಾದುದ್ದು ಯಾವುದು

"ದಿನವೂ ಅಸಂಖ್ಯ ಜೀವಗಳು ಮೃತ್ಯುದೇಗುಲಕ್ಕೆ ಹೋಗುತ್ತಿರುವುದನ್ನು ನೋಡಿಯೂ, ಬದುಕಿರುವವರು ತಾವು ಶಾಶ್ವತವೆಂದು ತಿಳಿದುಕೊಂಡಿರುವುದು" ಧರ್ಮಕ್ಕೆ ದೇವತೆಯಾದ ಯಮಧರ್ಮನಲ್ಲಿ ಪಾಂಡವರ ಜೇಷ್ಠನಾದ ಧರ್ಮರಾಯನು ಆಡಿದ ಮಾತು ಇದು.

ದ್ವೈತವನದಲ್ಲಿರುವಾಗ ಪಾಂಡವರ ಅರಣ್ಯವಾಸದ ಕೊನೆಯ ತಿಂಗಳುಗಳಲ್ಲಿ ಒಂದು ದಿನ, ಪಾಂಡವರನ್ನು ಕುರಿತು, ಬ್ರಾಹ್ಮಣನೊಬ್ಬನು:– "ನನ್ನ ಅಗ್ನಿ ಪ್ರತಿಷ್ಠಾನೆಯ ಅರಳಿಯನ್ನು ಜಿಂಕೆಯೊಂದು ತನ್ನ ಕೊಂಬಿಗೆ ಸಿಕ್ಕಿಸಿಕೊಂಡು ಓಡಿ ಹೋಯಿತು. ನೀವು ಅದನ್ನು ತಂದುಕೊಟ್ಟು ನನ್ನ ಮನೆಯ ಅಗ್ನಿಯನ್ನು ಕಾಪಾಡಬೇಕು" ಎಂದು ಬೇಡಿಕೊಂಡನು.

ಪಾಂಡವರು ತಕ್ಷಣವೇ ಜಿಂಕೆಯನ್ನು ಬೆನ್ನಟ್ಟಿ ಹೊರಟರು. ಅದನ್ನು ಅನುಸರಿಸಿ ಬಹುದೂರ ಹೋದಮೇಲೆ, ಜಿಂಕೆಯು ಇದ್ದಕ್ಕಿದ್ದಂತೆ ಕಣ್ಮರೆಯಾಯಿತು. ಅವರಿಗೆ ಏನು ಮಾಡಬೇಕೆಂದು ತೋರಲಿಲ್ಲ. ಬ್ರಾಹ್ಮಣನಿಗೆ ಪ್ರಿಯವಾದುದನ್ನು ಮಾಡಲಿಲ್ಲವೆಂದು ಯುದಿಷ್ಠಿರನಿಗೆ ಬೇಜಾರಾಯಿತು. ಹಸಿವು ಬಾಯಾರಿಕೆಯಿಂದ ಖಿನ್ನರಾದ ಪಾಂಡವರು, ವೃಕ್ಷವೊಂದರ ನೆರಳಿನಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಾ ಈ ದುರಾದೃಷ್ಟಕ್ಕೆ ಕಾರಣವೇನೆಂದು ಚಿಂತಿಸತೊಡಗಿದರು. ಯುಧಿಷ್ಠಿರನು:– "ಮನುಷ್ಯನಿಗೆ ಕಷ್ಟಗಳು ಬರುವಾಗ ಒಟ್ಟೊಟ್ಟಿಗೆ ಬರುತ್ತವೇ. ಅದಕ್ಕೆ ಕಾರವಿರಬೇಕೆಂದೇನಿಲ್ಲ. ನಾವು ಅವುಗಳಿಗೆ ಎದುರಿಸಿ, ಅನುಭವಿಸಿ ಮುಗಿಸಬೇಕಷ್ಟೇ" ಎಂದನು.

ಭೀಮನು:– "ದ್ರೌಪದಿಯನ್ನು, ಹಿಡಿದೆಳೆದಾಗ ಆ ದುಶ್ಯಾಸನನ್ನು ಕೊಲ್ಲದೇ ಬಿಟ್ಟಿರುವೆವಲ್ಲ ಅದ–ರಿಂದಾಗಿಯೇ, ಇವುಗಳನ್ನೆಲ್ಲ ಎದುರಿಸಬೇಕಾಯಿತು" ಎಂದನು. ಅರ್ಜುನ:– "ಆ ರಾಧೆಯನು, ದ್ರೌಪದಿಯನ್ನು ಅವಮಾನಿಸಿದಾಗ, ಸಹಿಸಿಕೊಂಡೆನಲ್ಲಾ ಆ ನನ್ನ ತಪ್ಪಿನಿಂದಾಗಿಯೇ ಇಷ್ಟೆಲ್ಲ ಆದದ್ದು" ಎಂದನು. ಸಹದೇವನು:– "ನಾನು ಆ ಶಕುನಿಯ ದ್ಯೂತದ ದಿನವೇ ಕೊಂದುಬಿಟ್ಟಿದ್ದರೇ, ಇಂತಹ ದುರಾದೃಷ್ಟ ನಮಗೆ ಪ್ರಾಪ್ತವಾಗುತ್ತಿರಲಿಲ್ಲ"

ಯುದಿಷ್ಠಿರನು:– "ಈಗ ಹಿಂದೆ ಆಗಿ ಹೋದದ್ದನ್ನೆಲ್ಲ ಚಿಂತಿಸಿ ಕುಳಿತುಕೊಳ್ಳುವ ಸಮಯವಲ್ಲ. ನಮಗೆಲ್ಲ–ರಿಗೂ ತುಂಬಾ ಬಾಯಾರಿಕೆಯಾಗುತ್ತಿದೆ; ನಕುಲ, ಹತ್ತಿರದಲ್ಲಿ ಎಲ್ಲಿಯಾದರೂ ನೀರು ಸಿಗುತ್ತದೆಯೇ" ಎಂದು ನೋಡು ಎನ್ನಲು... ಅಂತೆಯೇ ನಕುಲನು ಹೊರಟನು. ಹತ್ತಿರದಲ್ಲಿಯೇ ಒಂದು ಸರೋವರವು ಇರುವುದು ಕಾಣಿಸಿತು. ಅಲ್ಲಿಯ ನೀರು ತುಂಬ ತಣ್ಣಗಿದ್ದು ತಿಳಿಯಾಗಿತ್ತು. ಅದನ್ನು ಕುಡಿಯುವುದಕ್ಕೆಂದು ಹತ್ತಿರ ಹೋಗುತ್ತಿದ್ದಂತೆಯೆ, "ನನ್ನ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಮುಂಚೆ ನೀನು ನೀರು ಕುಡಿಯುವುದಾಗಲೀ, ತೆಗೆದುಕೊಂಡು ಹೋಗುವುದಾಗಲಿ ಕೂಡದು !" ಎಂದು ಅಶ–ರೀರವಾಣಿಯಾಯಿತು. ತುಂಬಾ ಬಾಯಾ–ರಿದ್ದ ನಕುಲನು ಅದನ್ನು ಲೆಕ್ಕಿಸದೇ ಸರೋವರದ ನೀರನ್ನು ಮನದಣಿದು ಹೋಗುವಷ್ಟು ಕುಡಿದನು; ಸತ್ತುಬಿದ್ದನು.

ಉಳಿದವರು ನಕುಲನಿಗೆ ಬಹಳ ಹೊತ್ತು ಕಾದರು. ಅವನು ಎಷ್ಟು ಹೊತ್ತಾದರೂ ಬಾರದಿರಲು,

ಯುದಿಷ್ಠಿರನು:– "ಅವನಿಗೆ ಏನಾಯಿತೆಂದು ನೋಡಿಕೊಂಡು ಬಾ" ಎಂದು ಸಹದೇವನನ್ನು ಕಳಿಸಿದನು.

ಸತ್ತು ಹೋಗಿದ್ದ ಸೋದರನನ್ನು ನೋಡಿ ಸಹದೇವನಿಗೆ ದಿಗ್ಭ್ರಮೆಯಾಯಿತು. ಆದರೇ, ಬಾಯಾರಿಕೆ ತಾಳುವುದಕ್ಕಾಗದೇ ಮೊದಲು ನೀರು ಕುಡಿಯೋಣವೆಂದು ಹೋಗಲು ಮೊದಲಿನಂತೆಯೆ ಅಶರೀರವಾಣಿಯಾಯಿತು. ನಕುಲನಂತೆಯೇ ಅವನೂ ಶೂನ್ಯದಿಂದ ಬಂದ ಆ ವಾಣಿಗೆ ಗಮನ ಕೊಡದೇ ನೀರು ಕುಡಿದನು; ಕುಡಿದು ಅವನೂ ಸತ್ತುಬಿದ್ದನು. ಅನಂತರ ಯುದಿಷ್ಠಿರನು ಕಳಿಸಿದ ಭೀಮಾರ್ಜುನರಿಗೂ ಅದೇ ಗತಿ ಆಯ್ತು. ಎಷ್ಟು ಹೊತ್ತಾದರೂ ಯಾರೂ ಹಿಂದಕ್ಕೆ ಬಾರದಿರಲು, ಯುದಿಷ್ಠಿರನೇ ಅಚ್ಚರಿಪಡುತ್ತಾ, ಅವರನ್ನು ಹುಡುಕಿಕೊಂಡು ಹೋದನು.

ಧರ್ಮರಾಯನು ಸರೋವರವು ಸಮೀಪ ಬಂದು ನೋಡುತ್ತಾನೇ.... ತನ್ನ ಪ್ರಿಯ ಸಹೋದರರೆಲ್ಲರೂ ಸತ್ತು ಮಲಗಿದ್ದಾರೆ ! ಅವನಿಗೆ ಏನು ಮಾಡುವುದೆಂದು ತೋಚದಾಯಿತು. "ಇಲ್ಲಿ ಯುದ್ಧವೇನೂ ನಡೆದಂತಿಲ್ಲ. ಏನೋ ಮೋಸ ನಡೆದಿರಬೇಕು. ಯಾರು ಹೀಗೆ ಮಾಡಿರಬಹುದು?" ಎಂದು ದುಃಖದಿಂದ ಯುದಿಷ್ಠಿರನು ಹಾಗೆ ಮೂರ್ಛೆ ಹೋದಂತಾಯಿತು. ಹಾಗೆಯೇ ಸಾವರಿಸಿಕೊಂಡು ಅಲ್ಲಿಯೇ ಕುಳಿತುಕೊಂಡನು. ಅಳುವುದಕ್ಕೆ ಕಣ್ಣಲ್ಲಿ ನೀರಿಲ್ಲ. ದುಃಖವನ್ನು ತಡೆಯಲಾರದೇ ಹುಚ್ಚನಂತೆ ಆದನು. ದೃಷ್ಟಿ ನೀರಿನ ಮೇಲೆ ಬೀಳಲು, ಬಾಯಾ–ರಿಕೆ ಮರುಕಳಿಸಿತು. ಗಂಟಲು ಒಣಗುತ್ತಿದ್ದ ಅವನು, ನೀರು ಕುಡಿಯಲೆಂದು ಸರೋವರದ ಅಂಚಿಗೆ ಬಂದನು. ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು ಇನ್ನೇನು ನೀರು ಕುಡಿಯುವುದರಲ್ಲಿದ್ದಾಗ, ಮೊದಲಿನಂತೆ ಅಶರೀರವಾಣಿಯಾಯಿತು. ಎತ್ತಿಕೊಂಡಿದ್ದ ನೀರು ಕೆಳಗೆ ಹಾಕಿ, ಯುದಿಷ್ಠಿರನು ಸುತ್ತಲೂ ನೋಡಿದನು.

ಅಶರೀರ ವಾಣಿಯೂ:– "ನಾನೊಬ್ಬ ಯಕ್ಷ. ಈ ಸರೋವರವು ನನ್ನದು. ನನ್ನ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಅಲ್ಲಿ ಯಾರೂ ನೀರು ಕುಡಿಯುವಂತಿಲ್ಲ. ನಾನು ನಿನ್ನ ಸೋದರರಿಗೆ ಹೇಳಿದೆ; ನನ್ನ ಮಾತು ಕೇಳದೆ ನೀರು ಕುಡಿದು ಎಲ್ಲರೂ ಸತ್ತು ಬಿದ್ದಿದ್ದಾರೆ" ಎಂದಿತು. ದಯನೀಯ ದನಿಯಲ್ಲಿ ಯುಧಿಷ್ಠಿರನು:– "ನೀನಾರು ಯಕ್ಷ? ಮಹಾಬಲಿಶಾಲಿಯಾದ ನನ್ನ ಈ ಸಹೋದರರನ್ನು ಪೆಟ್ಟೇ ಕೊಡದೇ ಸಾಯಿಸಿದೆ. ಅವರನ್ನು, ಜೀವಕ್ಕಾಗಿ ಹೋರಾಡುವುದಕ್ಕೂ ಬಿಡದೇ, ಹೇಗೆ ಸಾಯಿಸಿದೆ? ನೀನು ಯಾರಾದರೂ ಆಗಿರು. ನಿನ್ನ ಬಗ್ಗೆ ನನಗೆ ಭಯವಾಗಿದೆ. ನಿನಾರು ಸ್ವಾಮಿ ಪ್ರತ್ಯಕ್ಷನಾಗು !" ಎನ್ನಲು. ತಾಳೇಯ ಮರದಂತೆ ಭೂತಾಕಾರವಾಗಿದ್ದು, ಸೂರ್ಯಗ್ನಿಗಳಂತೆ ಜ್ವಲಿಸುತ್ತಿದ್ದ ಕಣ್ಣುಗಳುಳ್ಳ ಯಕ್ಷನು ಯುದಿಷ್ಠಿರನ ಮುಂದೆ ಕಾಣಿಸಿಕೊಂಡು,

"ನನ್ನ ಈ ಸರೋವರದಲ್ಲಿ ನನ್ನ ಮಾತನ್ನು ಮೀರಿ, ನೀರು ಕುಡಿದರೇ ನಿನಗೂ ಇದೇ ಗತಿಯಾದೀತು" ಎಂದನು. ಆ ಮಹಾ ಆಕಾರಕ್ಕೆ ನಮಸ್ಕಾರಿಸಿದ, ಯುಧಿಷ್ಠಿರನು:– "ನಿನ್ನ ಮಾತನ್ನು ಮೀರಿ ನಾನು ನಿನನ್ನು ಅಗೌರವಿಸುವುದಿಲ್ಲ. ಈ ಸರೋವರ ನೀನ್ನದೆಂದ ಮೇಲೆ, ನನಗೆ ಇಲ್ಲಿ ನೀರು ಕುಡಿಯಲು ಏನೇನೂ ಹಕ್ಕಿಲ್ಲ. ನಿನ್ನ ಪ್ರಶ್ನೆಗಳಿಗೆ ನನ್ನಿಂದಾದಷ್ಟು ಮಟ್ಟಿಗೆ ಉತ್ತ–ರಿಸಲು ಪ್ರಯತ್ನಿಸುತ್ತೇನೆ, ಕೇಳು" ಎಂದನು.

ಯಕ್ಷ :– "ನಿನ್ನ ವಿನಯದಿಂದ ನನಗೆ ತುಂಬಾ ಸಂತೋಷವಾಗಿದೆ. ನಿನಗೆ ಒಳ್ಳೇಯದಾಗಲಿ" ಎಂದು ಪ್ರಶ್ನೆಗಳನ್ನು ಕೇಳತೊಡಗಿದನು. ಯಕ್ಷ ಮತ್ತು ಧರ್ಮರಾಯನ ಸಂವಾದ.... ಯಕ್ಷ:– "ಸೂರ್ಯನು ಉದಯಿಸುವಂತೆ ಮಾಡುವುದು ಯಾವುದು? ಅವನೊಡನೆ ಚಲಿಸುವವರು ಯಾರು? ಅವನು ಅಸ್ತಮಿಸುವಂತೆ ಮಾಡುವುದು ಯಾವುದು? ಅವನ ನೆಲೆ ಎಲ್ಲಿ?ಯುದಿಷ್ಠಿರ:– "ಬ್ರಹ್ಮನು ಸೂರ್ಯನ ಉದಯಕ್ಕೆ ಕಾರಣನು. ಅವನೊಡನೆ ಚಲಿಸುವವರು ದೇವತೆಗಳು. ಅವನು ಅಸ್ತಮಿಸುವಂತೆ ಮಾಡುವುದು ಧರ್ಮ. ಸತ್ಯವು ಅವನ ನೆಲೆ;" ಯಕ್ಷ:– "ಬ್ರಹ್ಮನು (ಬ್ರಾಹ್ಮಣನು) ವಿದ್ಯಾವಂತನಾಗುವುದು ಹೇಗೆ? ಮಹತ್ತಾದುದನ್ನು ಪಡೆಯುವುದೆಂತು? ಯಾವಾಗಲೂ ಒದಗುವ ಸಹಾಯ ಯಾವುದು? ಅದನ್ನು ಪಡೆದುಕೊಳ್ಳುವುದು ಹೇಗೆ ?"

ಯುಧಿಷ್ಠಿರನು:– "ವೇದಾಧ್ಯಯನದ ಮೂಲಕ ವಿದ್ಯಾವಂತನಾಗಬಹುದು; ಮಹತ್ತಾದುದನ್ನ ಪಡೆಯುವುದೇ ತಪಸ್ಸಿನಿಂದ. ವಿವೇಕವೇ ಸರ್ವತ್ರ ಒದಗುವ ಸಹಾಯ; ಹಿರಿಯರ ಸೇವೆಯಿಂದ ಅದನ್ನು ಗಳಿಸಿಕೊಳ್ಳಬಹುದು"ಯಕ್ಷ:– "ಬ್ರಾಹ್ಮಣನಿಗೆ ದೈವತ್ವ ಬರುವುದು ಯಾವುದರಿಂದ? ಅವರನ್ನು ಮನುಷ್ಯರಾಗಿ ಇಟ್ಟಿರುವುದು ಯಾವುದು? ಅವರು ಉತ್ತಮರಾಗುವುದು, ಕೆಟ್ಟವರಾಗುವುದೂ ಯಾವುದ–ರಿಂದ ?"

ಯುಧಿಷ್ಠಿರ:– "ಬ್ರಾಹ್ಮಣರಿಗೆ ಅಧ್ಯಯನ, ಅಧ್ಯಾಪನದಿಂದ ದೈವತ್ವ. ಮರಣದಿಂದಾಗಿ ಮನುಷ್ಯತ್ವ. ಅವರನ್ನು ಉತ್ತಮರಾಗಿಸುವುದು ತಪಸ್ಸು. ಅವರು ಕೆಟ್ಟವರಾಗುವುದು ದೂಷಣೆಯಿಂದ;" ಯ:– "ಕ್ಷತ್ರಿಯರಿಗೆ ದೈವತ್ವ ಬರುವುದು ಯಾವುದರಿಂದ? ಅವರನ್ನು ಮನುಷ್ಯರಾಗಿ ಇಟ್ಟಿರುವುದು ಯಾವುದು? ಅವರು ಉತ್ತಮರಾಗುವುದು ಯಾವುದರಿಂದ, ಕೆಟ್ಟವರಾಗುವುದು ಯಾವುದರಿಂದ ?" ಯು:– "ಕ್ಷತ್ರಿಯರಿಗೆ ದೇವತನ ಬರುವುದು ಶಸ್ತ್ರಾಸ್ತ್ರಗಳಿಂದ, ಅವರನ್ನು ಮನುಷ್ಯರನ್ನಾಗಿಸುವುದು ಭಯ. ಅವರು ಉತ್ತಮರಾಗುವುದ ಯಜ್ಞದಿಂದ. ಕೆಟ್ಟವರಾಗುವುದು ಶರಣಾಗತರಾದವರನ್ನು ಕೈ ಬಿಡುವುದರಿಂದ" ಯ:– "ಯಜ್ಞಗಳಲ್ಲಿ ಸಾಮವೆಂದರೇನು? ಯಜುಸ್ಸೆಂದರೇನು? ಯಜ್ಞದ ಆಶ್ರಯವಾವುದು? ಯಾವುದು ಯಜ್ಞಕ್ಕೆ ಅವಶ್ಯಕ?" ಯು:– "ಯಜ್ಞದಲ್ಲಿ ಜೀವವೇ ಸಾಮ, ಮನಸ್ಸೇ ಯಜುಸ್; ಋಕ್ಕೆ ಯಜ್ಞದ ಆಶ್ರಯ; ಯಜ್ಞಕ್ಕೆ ಅವಶ್ಯವಾದುದ್ದು ಋಕ್ಕೆ;" ಯ;– "ಭೂಮಿಗಿಂತ ತೂಕವಾದುದ್ದು ಯಾವುದು? ಅಂತರಿಕ್ಷಕ್ಕಿಂತಲೂ ಎತ್ತರವಾದುದು ಯಾವುದು? ಗಾಳಿಗಿಂತ ವೇಗವಾದುದು ಯಾವುದು? ಹುಲ್ಲಿನ ದಳಗಳಿಗಿಂತಲೂ ಅಧಿಕ ಸಂಖ್ಯೆಯಲ್ಲಿರುವುವು ಯಾವುವು?" ಯು:– "ಭೂಮಿಗಿಂತಲೂ ತೂಕ ತಾಯಿ; ಅಂತರಿಕ್ಷಕ್ಕಿಂತಲೂ ಎತ್ತರವಾಗಿರುವುದು ತಂದೆ; ಗಾಳಿಗಿಂತ ವೇಗವಾದುದ್ದು ಮನಸ್ಸು; ಅಧಿಕ ಸಂಖ್ಯೆಯಲ್ಲಿರುವುವು ಚಿಂತೆಗಳು"(ಯಕ್ಷನು ಕೇಳುವ ಈ ಒಂದು ಕೆಳಗಿನ ಪ್ರಶ್ನೆಗೆ, ಯುಧಿಷ್ಠಿರನು ಕೊಡುವ ಉತ್ತರವನ್ನು ಮನಸ್ಸಿಟ್ಟು ಓದಿ...) ಯ:– "ಈ ಪ್ರಪಂಚದಲ್ಲಿ ಅತ್ಯಾಶ್ಚರ್ಯಕರವಾದುದ್ದು ಯಾವುದು ?" ಯು:– "ದಿನವೂ ಅಸಂಖ್ಯ ಜೀವಗಳು ಮೃತ್ಯುದೇಗುಲಕ್ಕೆ ಹೋಗುತ್ತಿರುವುದನ್ನು ನೋಡಿಯೂ, ಬದುಕಿರುವವರು ತಾವು ಶಾಶ್ವತವೆಂದು ತಿಳಿದುಕೊಂಡಿರುವುದು"

ಪ್ರತಿದಿನ ಈ ಭೂಮಿಯ ಮೇಲೆ ಒಂದಲ್ಲಾ ಒಂದು ರೋಗದಿಂದಾನೋ, ಅಪಘಾತಗಳಿಂದಾನೋ, ಆತ್ಮಹತ್ಯೆಯಿಂದಾನೋ ಅಥವಾ ಇನ್ಯಾವುದ್ಯಾವುದರಿಂದಾನೋ ಮನುಷ್ಯ ಮರಣ ಹೊಂದುತ್ತಾ ಇರುತ್ತಾನೆ. ಆದ–'ರೆ ಬದುಕಿರುವ ಮನುಷ್ಯ ಜೀವನುದ್ದಕ್ಕೂ ತಾನು ಈಗಲೇ ಸಾಯುವುದಿಲ್ಲ, ತನಗೆ ಬಹಳಷ್ಟು ವರ್ಷಗಳು ಆಯುಷ್ಯವಿದೆ ಎಂದು ಅಹಂಕಾರದಿಂದಾನೋ, ದರ್ಪದಿಂದಾನೋ ಇರುತ್ತಾನೆ. ಉದಾಹರಣೆಗೆ: ಸಾಯುವ ಅಂಚಿನಲ್ಲಿರುವ ಮುದುಕಾನೂ ದುಡ್ಡಿರುವ ತನ್ನ ಬೀರುವಿನ ಕೀಯನ್ನು ಸೊಂಟದಲೇ ಸಿಕ್ಕಿಸಿಕೊಂಡಿರುತ್ತಾನೆ. ತನ್ನ ಮಕ್ಕಳಿಗೆ ಮಾತ್ರ ಕೊಟ್ಟಿರುವುದಿಲ್ಲ. ತಾನು ಇನ್ನೂ ಬದುಕಿರುತ್ತೇನೆ ಎನ್ನುವುದೇ ಪ್ರತಿಯೊಬ್ಬ ಮನುಷ್ಯನ ಆಸೆಯನ್ನು ನೋಡಿ ಆಶ್ಚರ್ಯಪಡುತ್ತಿರುತ್ತಾನೆ.)ಯ:– "ನಿಜವಾದ ಮನುಷ್ಯನೆನ್ನಿಸಿಕೊಳ್ಳಬಲ್ಲವನು ಯಾರು ?"

ಯು:– "ಯಾವನ ಸತ್ಕಾರ್ಯಗಳ ಕೀರ್ತಿಯು ಭೂಮಂಡಲದಲ್ಲೆಲ್ಲಾ ಹರಡಿ, ಸ್ವರ್ಗವನ್ನು ತಲುಪಿರುವುದೋ ಮತ್ತು ಎಲ್ಲಿಯವರೆಗೆ ಆ ಕೀರ್ತಿ ಹಾಗೆಯೇ ಉಳಿದಿರುವುದೋ, ಅಲ್ಲಿಯವರೆಗೆ ಅಂಥ–'ವನನ್ನು ಮನುಷ್ಯ ಎಂದು ಕರೆಯಬಹುದು" ಎಂದು ಹೀಗೆ ಇನ್ನೂ ಒಂದಿಷ್ಟು ಪ್ರಶ್ನೆಗಳಿಗೆ ಯುಧಿಷ್ಠಿರನು ಉತ್ತರ ಹೇಳುತ್ತಾನೆ. ಆಗ,

ಯಕ್ಷ:– "ಸರಿ, ನಿನ್ನ ಉತ್ತರದಿಂದ ನನಗೆ ಸಂತೋಷವಾಗಿದೆ. ನೀನು ಪ್ರಪಂಚದಲ್ಲೆಲ್ಲಾ ಅತ್ಯಂತ ವಿವೇಕಿ ಮತ್ತು ಧರ್ಮಾತ್ಮನೆಂದು ಪ್ರಸಿದ್ಧನಾಗಿರುವೆ. ನನ್ನ ಸಂತೋಷಕ್ಕಾಗಿ ನಿನ್ನ ಸೋದರರಲ್ಲಿ ಒಬ್ಬನನ್ನು ಬದುಕಿಸುತ್ತೇನೆ. ಯಾರನ್ನು ನೀನು ಆರಿಸಿಕೊಳ್ಳುತ್ತಿಯೇ?" ಎಂದು ಕೇಳಿದನು.

ಯು:– "ಹಾಗಿದ್ದರೇ, ಓ ಯಕ್ಷ, ನೀಲಮೇಘಶ್ಯಾಮಸುಂದರನಾದ, ನಕುಲನು ಬದುಕಲಿ"

ಯಕ್ಷ:– "ನನಗೆ ನಿಜಕ್ಕೂ ಅಚ್ಚರಿಯೆನಿಸುತ್ತಿದೆ. ಭೀಮನು ನಿನಗೆ ತುಂಬಾ ಪ್ರೀತಿ ಪಾತ್ರ; ಅರ್ಜುನನ ಶೌರ್ಯದ ಮೇಲೆ ನಂಬಿಕೊಂಡು ಮುಂಬರುವ ಯುದ್ಧದಲ್ಲಿ ಗೆಲ್ಲುವ ಭರವಸೆ ಇಟ್ಟುಕೊಂಡಿದ್ದೀರಿ. ಆದರೂ ಅದು ಹೇಗೆ ನೀನು ನಕುಲನನ್ನು ಆರಿಸಿಕೊಂಡೆ ?"

ಯುಧಿಷ್ಠಿರನು:– "ಧರ್ಮವನ್ನು ಬಿಟ್ಟುಕೊಡುವ ಬದಲು, ಪ್ರಾಣವನ್ನಾದರೂ ಬಿಟ್ಟು ಕೊಡುವೆನು; ಪಾಂಡು ರಾಜನಿಗೆ ಕುಂತಿ–ಮಾದ್ರಿ ಎಂಬಿಬ್ಬರು ಪತ್ನಿಯರು; ಇಬ್ಬರ ಮಕ್ಕಳೂ ಬದುಕಲಿ ಎಂದು ನನ್ನ ಆಸೆ; ನಾನು ನನ್ನ ತಾಯಿ ಕುಂತಿಗೂ ಮತ್ತು ನಕುಲನು ಅವನ ತಾಯಿ ಮಾದ್ರೀಗೂ ಮಕ್ಕಳಾಗಿ ಉಳಿಯುವೆವು. ನನಗೆ ಇಬ್ಬರ ತಾಯಂದಿರ ಮೇಲೂ ಸಮಾನವಾದವಪ್ರೀತಿ ಇದೆ. ಆದ್ದರಿಂದ ನಾನು ನಕುಲನನ್ನು ಆರಿಸಿದೆ" ಎಂದನು. ಇದನ್ನು ಕೇಳಿ, ಬಹುಸಂತೋಷವಾದ,

ಯಕ್ಷನು:– "ನೀನು ಮಹಾನುಭಾವನಪ್ಪಾ! ನಿನ್ನಂಥವನನ್ನು ನಾನು ಇನ್ನೆಂದೂ ನೋಡಲಾರೆ. ನಿನ್ನ ಎಲ್ಲಾ ಸೋದರರು ಬದುಕಲಿ !" ಯಕ್ಷನು ಹೀಗೆನ್ನುತ್ತಲೀ ಸತ್ತರವರೆಲ್ಲರೂ ನಿದ್ದೆಯಿಂದ ಎದ್ದೇಳಿದಂತೆ ಎದ್ದರು. ಅವರ ಹಸಿವು ಬಾಯಾರಿಕೆ ಆಯಾಸಗಳೆಲ್ಲವೂ ಪರಿಹಾರವಾಗಿದ್ದವು. ಕಣ್ಣಿನಲ್ಲಿ ನೀರು ಸುರಿಸುತ್ತಾ ಯುದಿಷ್ಠಿರನು ಅವರನ್ನು ಪದೆಪದೆ ಆಲಿಂಗಿಸಿಕೊಂಡನು.

ಅನಂತರ ಯಕ್ಷನ ಕಾಲುಗಳಿಗೆ ನಮಸ್ಕರಿಸಿದ ಯುಧಿಷ್ಠಿರನು:– "ಸ್ವಾಮಿ ನೀನು ಯಾರು ? ಯಕ್ಷರಾರಿಗೂ ಇಂತಹ ಧರ್ಮಸೂಕ್ಷ್ಮಗಳು ತಿಳಿದಿರಲು ಸಾಧ್ಯವಿಲ್ಲ. ನೀನು ನಮ್ಮ ಪ್ರೀತಿಪಾತ್ರವನಾದ ಯಾವುದೋ ದೇವತೆ ಇರಬೇಕು. ದಯವಿಟ್ಟು ನೀನಾರೆಂದು ತಿಳಿಸು. ಅದನ್ನು ತಿಳಿಯಲು ನಾನು ಬಹಳ ಕುತೂಹಲದಿಂದಿದ್ದೇನೆ" ಎನ್ನಲು...

ತನ್ನ ಭಯಾನಕ ರೂಪವನ್ನು ತೊರೆದು ನಿಜರೂಪದಲ್ಲಿ ಕಾಣಿಸಿಕೊಂಡ, ಯಕ್ಷನು:– "ನಾನು ಯಮಧರ್ಮ ನಿನ್ನ ತಂದೆ. ನಿನ್ನನ್ನು ಮಾತನಾಡಿಸಲೆಂದು ಬಂದೆನು. ನಿನ್ನನ್ನು ನೋಡಿ ಸಂತೋಷವಾಯಿತು. ನೀನು ಸೋದರರೊಂದಿಗೆ ಲೋಕವನ್ನು ಜಯಿಸುವೆ.

ನೀನು ಈಗಾಗಲೇ ನನ್ನ ಋಜುಮಾರ್ಗವನ್ನು ಗೆದ್ದುಕೊಂಡಿರುವೆ. ನಿನ್ನ ಈ ಗೆಲುವಿನ ಮುಂದೆ ಇಡೀ ಲೋಕವನ್ನು ಗೆಲ್ಲುವುದೂ ಸಹ ದೊಡ್ಡ ವಿಷಯವಲ್ಲ ! ಮುಂದೆ ಎಲ್ಲರೂ ನಿನ್ನನ್ನು ಸ್ಮರಿಸುವರು. ನೀನು ಇಲ್ಲಿಗೆ ಬರಲಿ ಎಂದು ಬ್ರಾಹ್ಮಣನ ಅರಣಿಯನ್ನು ಹೊಯ್ದವನು ನಾನೆ ! ಇದೋ ಇದನ್ನು ತೆಗೆದುಕೊಂಡು ಹೋಗಿ ಅವನಿಗೆ ಕೊಡು. ನಿನಗೆ ಇನ್ನೊಂದು ವರವನ್ನೂ ಕೊಡುವೆನು. ನಿಮ್ಮ ಹನ್ನೆರಡು ವರ್ಷದ ವನವಾಸವು ಮುಗಿಯಿತಲ್ಲವೇ ? ಉಳಿದ ಒಂದು ವರ್ಷ ಅಜ್ಞಾತವಾಸವೇ ಬಹಳ ಕಷ್ಟವಾದದ್ದು. ನೀವೆಲ್ಲ ಧರ್ಮದ ಕವಚವನ್ನು ಹೊಂದಿರುವವರು. ನಿವೆಲ್ಲೇ ಹೋಗಲಿ, ಏನೆ ಮಾಡಲಿ, ಈ ಅವಧಿಯಲ್ಲಿ ನಿಮ್ಮನ್ನು ಯಾರೂ ಗುರುತಿಸದಿರಲಿ" ಎಂದು ವರವನ್ನು ಕೊಟ್ಟನು. ಯುದಿಷ್ಠಿರನಿಗೆ ತಂದೆಯ ದರ್ಶನದಿಂದ ತುಂಬಾ ಸಂತೋಷವಾಯಿತು. ಅವನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ, ಅವನ ಪಾದಗಳನ್ನು ಪುನಃಪುನಃ ಚುಂಬಿಸಿದನು. ಪಾದಗಳ ಮೇಲೆ ತಲೆಯಿಟ್ಟು ಬಹಳ ಹೊತ್ತು ಅತ್ತನು. ಅನಂತರ ಸಾವರಿಸಿಕೊಂಡು ಮೇಲೆದ್ದ,

ಯುಧಿಷ್ಠಿರನು:– "ತಂದೆಯೇ! ನಿನ್ನನ್ನ ನೋಡಿದ ಮೇಲೆ, ಬಾಳಿನಲ್ಲಿ ನಂಗಿನ್ನೇನೂ ಬೇಡ. ಆದ–'ರೇ ನನಗೆ ಇನ್ನೊಂದು ವರವನ್ನು ಕೊಡಬೇಕು. ನನ್ನೊಳಗೆ ಅಡಗಿರುವ ಕ್ರಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಅರಿಷಡ್ವರ್ಗಗಳ ಮೇಲೆ ನನಗೆ ಜಯವನ್ನು ಕರುಣಿಸು" ಎಂದು ಬೇಡಿದನ

ಧರ್ಮದೇವನು ನಕ್ಕು:– "ಮಗು, ನಿನ್ನಲ್ಲಿರುವುದನ್ನು ನಾನೇನು ನಿನಗೆ ವರವಾಗಿ ಕೊಡುವುದೆಂತು? ನೀನು ಈ ಅರಿಷಡ್ವರ್ಗಗಳನ್ನು ಬಹಳ ಹಿಂದೆಯೇ ಗೆದ್ದಿದ್ದೀಯೇ. ಹೋಗಿ, ಮಕ್ಕಳೆ ಸುಖವಾಗಿರಿ. ನಿಮ್ಮ ಕಷ್ಟಗಳೆಲ್ಲ ಶೀಘ್ರವಾಗಿ ಪರಿಹಾರವಾಗುವವು. ನಾನು ನಿಮ್ಮೊಡನೆ ಇರುವೆನು. ನಾನಿದ್ದಲ್ಲಿ ಜಯ ಖಂಡಿತ. ಕೃಷ್ಣನಿದ್ದಲ್ಲಿ ನಾನಿರುವೆನು. ನನ್ನನ್ನು ಸ್ಮರಿಸಿಕೊಳ್ಳುತ್ತಿರುವವರೆಗೂ ನಿಮಗೆ ಯಾವ ಪೆಟ್ಟೂ ಆಗಲಾರದು. ನಿಮಗೆ ಶುಭವಾಗಲಿ....!" ಎಂದನು.

ಉಳಿದ ಒಂದು ವರ್ಷದ ಅಜ್ಞಾತವಾಸದ ಸಮಯದಲ್ಲಿ ತಮ್ಮನ್ನು ಪತ್ತೆ ಮಾಡಲು ದುರ್ಯೋಧನನು ಇನ್ನಿಲ್ಲದ ಹಾಗೆ ಪ್ರಯತ್ನಿಸುವನೆಂದು ಪಾಂಡವರಿಗೆ ಗೊತ್ತಿತ್ತು. ಹಾಗೆ ತಮ್ಮ ಇರುವುದನ್ನು ತಿಳಿದುಬಿಟ್ಟರೇ ಮತ್ತೊಮ್ಮೆ ಹನ್ನೆರಡು ವರ್ಷದ ವನವಾಸ ಮತ್ತು ಒಂದು ವರ್ಷದ ಅಜ್ಞಾತವಾಸ ಮಾಡಬೇಕು. ಆದ್ದರಿಂದ ಉಳಿದೆಲ್ಲ ವರ್ಷಗಳಿಗಿಂತಲೂ ಈ ಒಂದು ವರ್ಷವು ಕಳೆಯುವುದು ಕಷ್ಟ. ಆದರೇ ಧರ್ಮ ದೇವನ ಮಾತು ಅವರಲ್ಲಿ ಧೈರ್ಯ ತುಂಬಿತು. ತಮ್ಮ ಅಜ್ಞಾತ ವಾಸದ ಅವಧಿಯು ಎಲ್ಲಿ, ಹೇಗೆ ಕಳೆಯಬೇಕೆಂದು



ಪ್ರಶಾಂತಭಟ್ ಕೋಟೇಶ್ವರ

# ಬದುಕು ಒಡ್ಡಿದ ಸವಾಲನ್ನು ಸರಳವಾಗಿ ಸ್ವೀಕರಿಸಿದ ಜಸ್ಟಿಸ್ ಸೋನಿಯಾ

ಆ ದಿನ ಬೆಳಗಿನ ಜಾವವೇ ಆಕೆಯ ತಂದೆ ತಾಯಿಗಳು ಪರಸ್ಪರ ವಾದ ಮಾಡುತ್ತಿದ್ದರು. ಆಗ ಅವರ ಮಗಳು ಸೋನಿಯಾ ಒಂದು ನಿರ್ಧಾರವನ್ನು ಕೈಗೊಂಡಳು. ಅಂದು ಆಕೆ ಕೈಗೊಂಡ ನಿರ್ಧಾರವೇ ಇಂದಿಗೂ ಆಕೆಯನ್ನು ಬದುಕಿನಲ್ಲಿ ಮುಂದೆ ಸಾಗುವಂತೆ ಮಾಡಿದ್ದು ಪ್ರಪಂಚದ ಅತ್ಯಂತ ಬಲಿಷ್ಠ ದೇಶ ಎಂದೇ ಕರೆದುಕೊಳ್ಳುವ ಅಮೆರಿಕಾ ದೇಶದ ಸುಪ್ರೀಂಕೋರ್ಟ್ ನ ಜಡ್ಜ್ ಆಗಿ ನೇಮಕಗೊಳ್ಳುವಂತೆ ಮಾಡಿದ್ದು ಎಂದರೆ ಆಕೆಯ ಸಂಕಲ್ಪ ಶಕ್ತಿ ಅದ್ಭುತ. ಅದು 1962ರ ಸಮಯ. ಏಳು ವರ್ಷ ವಯಸ್ಸಿನ ಸೋನಿಯಾ ತನ್ನ ಪಾಲಕರೊಂದಿಗೆ ದ ಬ್ರಾಂಕ್ಸ್ ಎಂಬ ಪಟ್ಟಣದಲ್ಲಿ ವಾಸವಾಗಿದ್ದಳು. ಕೇವಲ ಮೂರು ವಾರಗಳ ಹಿಂದೆ ಆಕೆಗೆ ಟೈಪ್ ಒನ್ ಡಯಾಬಿಟಿಸ್ ಇರುವುದು ಪತ್ತೆಯಾಗಿತ್ತು. ವೈದ್ಯರು ಪ್ರತ್ಯೇಕವಾಗಿ ಅವರ ಮಗಳ ಆಯಸ್ಸಿನ ಅವಧಿ ಅತ್ಯಂತ ಕಡಿಮೆಯದಾಗಿದೆ ಎಂದು ಪಾಲಕರನ್ನು ಕರೆದು ಹೇಳಿದ್ದರು. ಪ್ರತಿದಿನ ಆಕೆ ಕಡ್ಡಾಯವಾಗಿ ಇನ್ಸುಲಿನ್ ಇಂಜೆಕ್ಷನ್ ಪಡೆಯಲೇಬೇಕಾಗಿ–ತ್ತು. ಆಲ್ಕೋಹಾಲ್ ಸೇವನೆಯ ಕಾರಣದಿಂದ ತನ್ನ ದೇಹದ ಮೇಲಿನ ಸ್ಥಿರತೆಯನ್ನು ಕಳೆದುಕೊಂಡಿದ್ದ ಆಕೆಯ ತಂದೆಯ ಕೈಗಳು ಇಂಜೆಕ್ಷನ್ ನ ಸಿರಿಂಜ್ ಹಿಡಿಯಲು ಸಾಧ್ಯವಾಗದಷ್ಟು ನಡುಗುತ್ತಿದ್ದವು. ಆಕೆಯ ತಾಯಿ ಎರಡೆರಡು ಶಿಫ್ಟ್ ಗಳಲ್ಲಿ ನರ್ಸ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಳು.ನಸುಕಿನ ಜಾವದಲ್ಲಿಯೇ ಮನೆಯನ್ನು ಬಿಡುತ್ತಿದ್ದ ಆಕೆ ಕತ್ತಲು ಕಂತಿದ ಮೇಲೆ ಮನೆಗೆ ಮರಳುತ್ತಿದ್ದಳು. ಮಗಳ ಆರೋಗ್ಯವನ್ನು ಕಾಯುವ ನಿಟ್ಟಿನಲ್ಲಿ, ಆಕೆಯ ಸಾವನ್ನು ಮುಂದೂಡುವ ಸಲುವಾಗಿ ಪ್ರತಿದಿನ ಮಗಳಿಗೆ ಇಂಜೆಕ್ಷನ್ ಯಾರು ಕೊಡಬೇಕು ಎಂಬ ವಿಷಯಕ್ಕೆ ಆ ದಿನ ಮುಂಜಾನೆಯೇ ದಂಪತಿಗಳಿಬ್ಬರ ನಡುವೆ ವಾಗ್ವಾದ ಆರಂಭವಾಗಿತ್ತು.

ತಂದೆ ತಾಯಿಯ ವಾಗ್ವಾದಕ್ಕೆ ಎಚ್ಚರವಾದ ಸೋನಿಯಾ ಅಡುಗೆ ಮನೆಯ ಕಟ್ಟೆಯ ಮೇಲೇರಿ ನಿಂತು ನೀವಿಬ್ಬರೂ ಚಿಂತಿಸಬೇಡಿ ಇನ್ನು ಮುಂದೆ ಸಮಯಕ್ಕೆ ಸರಿಯಾಗಿ ಇಂಜೆಕ್ಷನ್ ನಾನೇ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಲೇ ನೀರು ತುಂಬಿದ ಪಾತ್ರೆಯನ್ನು ಸ್ಟೌ ನ ಮೇಲೆ ಇಟ್ಟು ಬರ್ನರ್ ಗೆ ಉರಿ ತಾಗಿಸಿ ಅದರಲ್ಲಿ ಇನ್ಸುಲಿನ್ ಇಂಜೆಕ್ಷನ್ ನ ಸ್ಟೀಲ್ ಸಿರಿಂಜನ್ನು ಹಾಕಿ ಕುದಿಯಲಿಟ್ಟಳು. ಬಳಸಿ ಬಿಸಾಡುವ ಇಂಜೆಕ್ಷನ್ ಸಿರಿಂಜುಗಳಿಲ್ಲದ, ಹಳೆಯ ಶೈಲಿಯಲ್ಲಿ ಇಂಜೆಕ್ಷನ್ ನ ಸೂಜಿಯನ್ನು ಕುದಿಸಿ ಮತ್ತೆ ಮರುಬಳಕೆ ಮಾಡುವ ಪದ್ಧತಿ ಚಾಲ್ತಿಯಲ್ಲಿದ್ದ ಕಾಲ ಅದಾಗಿ–ತ್ತು. ಆ ದಿನದಿಂದ ಮತ್ತೆ ಮುಂದೆ ಆಕೆ ಪ್ರತಿದಿನ ತನ್ನ ಇಂಜೆಕ್ಷನ್ನನ್ನು ತಾನೇ ಮಾಡಿಕೊಳ್ಳುವುದನ್ನು ಕಲಿತಳಷ್ಟೇ ಅಲ್ಲ ಬದುಕಿದ್ದಕ್ಕೂ ಇಂದಿಗೂ ಅದನ್ನು ಪಾಲಿಸುತ್ತಿದ್ದಾಳೆ.

ಇಂದಿನ ಗುಣಮಟ್ಟಕ್ಕೆ ಹೋಲಿಸಿದರೆ ಅಂದಿನ ಸೂಜಿಗಳು ಅಷ್ಟೇನು ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಅದಲ್ಲದೆ ದೇಹದ ರಕ್ತದಲ್ಲಿರುವ ಸಕ್ಕರೆಯ ಅಂಶವನ್ನು ಪತ್ತೆ ಮಾಡಲು ಬೆರಳಿನ ತುದಿಯಲ್ಲಿ ರೇಜರ್ ಬ್ಲೇಡನ್ನು ಬಳಸಬೇಕಿತ್ತು. ಮೊದಲ ಬಾರಿ ಆಸ್ಪತ್ರೆಯ ಪ್ರಯೋಗಾಲಯದ ತಂತ್ರಜ್ಞರು ಆಕೆಯ ಕೈಯ ಬೆರಳಿನಲ್ಲಿ ಸೂಜಿಯನ್ನು ಚುಚ್ಚಿ ರಕ್ತದ ಮಾದರಿಯನ್ನು ಸಂಗ್ರಹಿಸಲು ಹೋದಾಗ ಆಕೆ ಭಯಪಟ್ಟು ಆಸ್ಪತ್ರೆಯಿಂದಲೇ ಓಡಿ ಹೊರಗೆ ಹೊರಟು ಹೋಗಿ ಕಾರೊಂದರ ಅಡಿಯಲ್ಲಿ ಬಚ್ಚಿಟ್ಟುಕೊಂಡಿದ್ದಳು. ಆಕೆಯ ಪಾದವನ್ನು ಹಿಡಿದು ಆಕೆಯನ್ನು ಹೊರಗೆ ಎಳೆಯುವ ಸಾಹಸವನ್ನು ಮಾಡಿದ್ದರು.

ಆದರೆ ಇದೀಗ ಪ್ರತಿದಿನ ಮುಂಜಾನೆ ಆಕೆ ಕುದಿಯುತ್ತಿರುವ ನೀರಿನಿಂದ ಸಿರಿಂಜ್ ಅನ್ನು ತೆಗೆದು ಅದರಲ್ಲಿ ನಿಗದಿತ ಪ್ರಮಾಣದ ಇನ್ಸುಲಿನ್ ಅನ್ನು ತುಂಬಿಸಿ ನನ್ನ ತೊಡೆಯ ಭಾಗದಲ್ಲಿ ಇಂಜೆಕ್ಷನ್ ಚುಚ್ಚಿ ಕೊಳ್ಳುತ್ತಿದ್ದಳು.ನಂತರ ತನ್ನ ಪುಸ್ತಕಗಳನ್ನು ಜೋಡಿಸಿಕೊಂಡು ಬಸ್ ಹಿಡಿಯಲು ಓಡುತ್ತಿದ್ದಳು. ಇದು ಅತ್ಯಂತ ಸೂಕ್ಷ್ಮತೆಯನ್ನು ಸಾರುವ ಅಥವಾ ಸ್ಫೂರ್ತಿಯನ್ನು ನೀಡುವ ಕಥೆಯಲ್ಲ ಆಕೆಯ ಬದುಕಿನ ದಿನನಿತ್ಯದ ಕ್ರಿಯೆಗಳಲ್ಲಿ ಒಂದಾಗಿತ್ತು.

ತನ್ನ 9ನೇ ವಯಸ್ಸಿನಲ್ಲಿ ವಿಪರೀತ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ತಂದೆಯನ್ನು ಆಕೆ ಕಳೆದುಕೊಂಡಳು. ಆಕೆಯ ತಾಯಿ ಸೆಲಿನ ತನ್ನ ಇಬ್ಬರು ಮಕ್ಕಳನ್ನು ಅತ್ಯಂತ ಕಡಿಮೆ ಅನುಕೂಲಗಳನ್ನು ಹೊಂದಿರುವ ಸಾರ್ವಜನಿಕ–ರಿಗೆ ಸರ್ಕಾರ ಇಲ್ಲವೇ ಸ್ಥಳೀಯ ಸಂಸ್ಥೆಗಳು ನೀಡುವ ಸಾರ್ವಜನಿಕ ವಸತಿಯಲ್ಲಿ ವಾಸಿಸುತ್ತ ಒತ್ತಡದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಬದುಕನ್ನು ಸಾಗಿಸಿದಳು. ಅವರು ವಾಸಿಸುತ್ತಿದ್ದ ವಸತಿ ಸಮುಚ್ಚಯವು ಚಳಿಗಾಲದಲ್ಲಿ ವಿಪರೀತ ಚಳಿ ಹಾಗೂ ಬೇಸಿಗೆಯಲ್ಲಿ ವಿಪರೀತ ಬಿಸಿಲಿನಿಂದ ಕೂಡಿರುತ್ತಿತ್ತು. ಆದರೆ ಸೋನಿಯಾಗೆ ಅಲ್ಲಿ ಸಾಕಷ್ಟು ಪುಸ್ತಕಗಳು ದೊರೆಯುತ್ತಿದ್ದವು.. ಕೈಗೆ ಸಿಗುತ್ತಿದ್ದ ಎಲ್ಲ ಪುಸ್ತಕಗಳನ್ನು ಓದುತ್ತಿದ್ದ ಆಕೆ ಪುಸ್ತಕಗಳ ಲೋಕದಲ್ಲಿ ಕಳೆದು ಹೋಗುತ್ತಿದ್ದಳು. ನ್ಯಾನ್ಸಿ ಡ್ರಿವ್ ಎಂಬ ಡಿಟೆಕ್ಟಿವ್ ಪಾತ್ರವನ್ನು ಅತ್ಯಂತ ಪ್ರೀತಿಯಿಂದ ಆರಾಧಿಸುತ್ತಿದ್ದಳು.

ನ್ಯಾನ್ಸಿ ಡ್ರಿವ್ ಓರ್ವ ಪುಟ್ಟ ಯುವತಿಯಾಗಿದ್ದು ಹಿರಿಯರಿಗಿಂತ ವಿಭಿನ್ನವಾಗಿ ಯೋಚಿಸುತ್ತಿದ್ದ ಆಕೆ ಓರ್ವ ಡಿಟೆಕ್ಟಿವ್ ಆಗಿದ್ದು ತನ್ನ ಮುಂದೆ ಬರುವ ಯಾವುದೇ ತೊಂದರೆಗಳನ್ನು ಬೇಧಿಸಲು ಇತರರ ಅನುಮತಿಗಾಗಿ ಕಾಯದ ದಿಟ್ಟ ಹೆಣ್ಣು ಮಗಳಾಗಿದ್ದಳು. ಪುಟ್ಟ ಸೋನಿಯಾ ಕೂಡ ಡಿಟೆಕ್ಟಿವ್ ಆಗಬಯಸಿದಳು. ಆಕೆ ಭೇಟಿಯಾದ ವೈದ್ಯರೊಬ್ಬರು ಡಿಟೆಕ್ಟಿವ್ ಕಾರ್ಯ ತುಂಬಾ ದೈಹಿಕ ಶ್ರಮವನ್ನುಬೇಡುವಂತಹದ್ದಾಗಿದ್ದು ಪ್ರಸ್ತುತ ಆಕೆ ಇರುವ ಆರೋಗ್ಯ ಸ್ಥಿತಿಗೆ ಅದು ಅಷ್ಟೇನೂ ಒಗ್ಗುವುದಿಲ್ಲ ಎಂದು ಸಲಹೆ ನೀಡಿದರು. ಇದು ಆಕೆಯಲ್ಲಿ ತುಸು ಬೇಸರವನ್ನು ಉಂಟುಮಾಡಿತು.

ಅದೊಂದು ದಿನ ಆಕೆ ದೂರದರ್ಶನದಲ್ಲಿ ಪೆರ್ರಿ ಮೇಸನ್ ಎಂಬ ವಕೀಲರ ವಾದ ವಿವಾದ ಕೋರ್ಟ್ ರೂಮ್ ಸನ್ನಿವೇಶಗಳು, ಅತ್ಯಂತ ತಾಳ್ಮೆ ಹಾಗೂ ಅಧಿಕಾರಯುತ ಸ್ವರದಲ್ಲಿ ಎಲ್ಲಾ ವಾದ ವಿವಾದಗಳನ್ನು ಆಲಿಸುತ್ತಿದ್ದ ನ್ಯಾಯಾಧೀಶರ ವರ್ತನೆಗಳನ್ನು ನೋಡಿ ಪ್ರಭಾವಿತಗೊಂಡಳು . ಡಯಾಬಿಟೀಸಿನಿಂದ ಬಳಲುತ್ತಿರುವವರು ಜಡ್ಜ್ ಆಗಬಾರದು ಎಂದು ಯಾರೂ ಆಕೆಗೆ ಹೇಳಿರಲಿಲ್ಲ ಅಲ್ಲವೇ!.

ತನ್ನ ಹತ್ತನೇ ವಯಸ್ಸಿನಲ್ಲಿ ಆಕೆ ಕೌಟುಂಬಿಕ ಹಾಗೂ ಆರ್ಥಿಕ ಒತ್ತಡಗಳಿಂದ ದಣಿಯುತ್ತಿದ್ದ ತನ್ನ ತಾಯಿಗೆ ನಾನು ಮುಂದೆ ಕಾನೂನು ವಿದ್ಯಾಭ್ಯಾಸವನ್ನು ಮಾಡಿ ಲಾಯರ್ ಆಗುವೆ ನಂತರ ನ್ಯಾಯಾಧೀಶರಾಗಲು ಇರುವ ಅರ್ಹತಾಪರೀಕ್ಷೆಯನ್ನು ಬರೆದು ನ್ಯಾಯಾಧೀಶಳಾಗುವೆ ಎಂದು ನಿರ್ಧಾರಯುತ ಸ್ವರದಿಂದ ಹೇಳಿದಳು. ಅದು ಸಾಧ್ಯವಿಲ್ಲ ಎಂದು ಹೇಳಲು ಆಕೆಯ ತಾಯಿ ಸೆಲಿನಾಗೆ ಮಾತುಗಳೇ ಹೊರಬರಲಿಲ್ಲ. ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ಆಕೆ ನಂತರ ಕಾರ್ಡಿನಲ್ ಸ್ಪೆಲ ಮನ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದಳು. ಹೈಸ್ಕೂಲಿನಲ್ಲಿ ಆಕೆ ಶಾಲೆಯ ಚರ್ಚೆಯ ಗುಂಪನ್ನು ಸೇರಿಕೊಂಡು ಅತ್ಯುತ್ತಮ ಚರ್ಚಾಪಟುವಾಗಿ ರೂಪುಗೊಂಡಳು. ಅಲ್ಲಿ ಆಕೆ ಮಂಡಿಸುತ್ತಿದ್ದ ವಾದಗಳನ್ನು ತೆಗೆದು ಹಾಕಲು ಯಾರೊಬ್ಬರಿಗೂ ಸಾಧ್ಯವಾಗುತ್ತಿರಲಿಲ್ಲ.

ಆಗ ಆಕೆ ಓದುತ್ತಿದ್ದ ಹೈಸ್ಕೂಲಿನ ಶಾಲೆಯ ಕೌನ್ಸಿಲರ್ ಒಬ್ಬರು ಆಕೆಗೆ ಐವಿ ಲೀಗ್ ವಿಶ್ವವಿದ್ಯಾಲಯಕ್ಕೆ ಅರ್ಜಿ ಹಾಕಲು ಸಲಹೆ ನೀಡಿದರು. ಪ್ರಿನ್ಸ್ ಟನ್ ಎಂಬ ಹೆಸರನ್ನೇ ಕೇಳದ ಸೋನಿಯಾ ಹಾಗೆಂದರೇನು ಎಂದು ಕೇಳಿದ್ದಳಾದರೂ ಅವರ ಸಲಹೆಗೆ ಒಪ್ಪಿ ಅರ್ಜಿ ಗುಜರಾಯಿಸಿದ್ದಳು. ಅಲ್ಲಿ ಆಕೆಯ ಪ್ರವೇಶಕ್ಕೆ ಅನುಮತಿ ದೊರೆಯಿತು. 1972 ರ ಸೆಪ್ಟಂಬರ್ ತಿಂಗಳಿನಲ್ಲಿ ಕೇವಲ ಒಂದು ಸೂಟ್ ಕೇಸ್ ಹಾಗೂ ಇನ್ಸುಲಿನ್ ಕಿಟ್ ನೊಂದಿಗೆ ಆಕೆ ಅಲ್ಲಿಗೆ ಬಂದಿಳಿದಳು. ತಮ್ಮ ಬೇಸಿಗೆಯ ರಜೆಗಳನ್ನು ಯುರೋಪ್ ಮತ್ತಿತರ ಭಾಗಗಳ ಪ್ರವಾಸದಲ್ಲಿ ಕಳೆದ, ಅತ್ಯಾಧುನಿಕ ಪ್ರೈವೇಟ್ ಶಾಲೆಗಳಲ್ಲಿ ಓದುತ್ತಿದ್ದ ಆಕೆಯ ಸಹಪಾಠಿಗಳು, ಆಕೆ ಗಿಂತ ಎಲ್ಲಾ ರೀತಿಯಲ್ಲಿ ಹೆಚ್ಚಿನ ಸವಲತ್ತುಗಳನ್ನು ಹೊಂದಿದವರ ಮಧ್ಯದಲ್ಲಿ ಆಕೆ ಓದಬೇಕಾಗಿತ್ತು. ಮೊದಲ ಸೆಮಿಸ್ಟರ್ ನಲ್ಲಿ ಆಕೆಗೆ ಅತ್ಯಂತ ಕಡಿಮೆ ಅಂಕಗಳು ಬಂದವು. ಬಹಳಷ್ಟು ವಿದ್ಯಾರ್ಥಿಗಳು ತೀವ್ರ ಆರೋಗ್ಯದ ತೊಂದರೆ ಇರುವಂತಹ ವ್ಯಕ್ತಿಗೆ ವಿಶ್ವವಿದ್ಯಾಲಯದಲ್ಲಿ ಜಾಗ ನೀಡುವ, ಶಿಕ್ಷಣ ಪಡೆಯುವ ಅವಶ್ಯಕತೆ ಇದೆಯೇ? ಎಂದು ಪ್ರಶ್ನಿಸಿ ಪತ್ರವನ್ನು ಕೂಡ ಬರೆದರು. ಸೋನಿಯಾ ಆ ವರ್ಷದ ಬೇಸಿಗೆಯ ರಜೆಯಲ್ಲಿ ತನಗೆ ತಾನೇ ಶಿಕ್ಷಕಿಯಾಗಿದ್ದುಕೊಂಡು ಇತರರಿಗೆ ಈಗಾಗಲೇ ರೂಢಿಯಾಗಿದ್ದ ಎಲೈಟ್ ವಿದ್ಯಾರ್ಥಿಗಳು ಎಂದು ಅಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ತಮ್ಮನ್ನು ತಾವು ಕರೆದುಕೊಳ್ಳಲು ಅತ್ಯವಶ್ಯಕವಾಗಿದ್ದ ವ್ಯಾಕರಣ, ಭಾಷೆಯ ಮೇಲಿನ ಹಿಡಿತ ಹಾಗೂ ಮಾತಿನ ಶೈಲಿ ಗಳನ್ನು ಕಲಿತಳು. ಅಂತಿಮವಾಗಿ ಅತ್ಯುನ್ನತ ಗೌರವದ ಅಂಕಗಳನ್ನು ಪಡೆದು ತರಗತಿಗೆ ಮೊದಲಿಗಳಾಗಿ ಆಕೆ ತನ್ನ ಪದವಿಯನ್ನು ಪೂರೈಸಿದಳು. ನಂತರ ಬಂದದ್ದು ಯೇಲ್ ನ ಕಾನೂನು ವಿದ್ಯಾಲಯ.... ಅಲ್ಲಿಂದ ಆಕೆಯ ಪಯಣ ಮ್ಯಾನ್ ಹ್ಯಾಟನ ನ ಡಿಸ್ಟ್ರಿಕ್ಟ್ ಕಛೇರಿಗೆ ಸಾಗಿ–ತು. ಅಲ್ಲಿ ಆಕೆ ಕೊಲೆ ಮತ್ತು ಮಾದಕ ವಸ್ತು ಕಳ್ಳ ಸಾಗಾಣಿಕೆಯ ಕೇಸ್ ಗಳನ್ನು ನಿರ್ವಹಿಸಿದರು. ತಾನು ಬೆಳೆದು ಬಂದ ಪರಿಸರದ ಸುತ್ತಲಿನಲ್ಲಿ ನಡೆಯುತ್ತಿದ್ದ ವಿದ್ಯಮಾನಗಳ, ಅಪರಾಧಗಳ ಕುರಿತು ಆಕೆಗೆ ಈಗಾಗಲೇ ಇದ್ದ ಅರಿವಿಗೆ ಕಾನೂನಿನ ಚಿಕಿತ್ಸಕ ಬುದ್ಧಿಯು ಸೇರಿತ್ತು. ಆಕೆಯ ವಾದ ವಿವಾದಗಳನ್ನು ಆಲಿಸಿದ ಆಕೆಯ ಸಹೋದ್ಯೋಗಿಯೊಬ್ಬರು ಕೋರ್ಟ್ ರೂಂನಲ್ಲಿ ತಾನು ಗಮನಿಸಿರುವ ಎದುರಿಸಲು ಅತ್ಯಂತ ಕಠಿಣವಾದ ವಕೀಲರಲ್ಲಿ ಆಕೆ ಒಬ್ಬಳು ಎಂದು ಪ್ರಶಂಸಿದ್ದರು.... ನಿಜ ಬದುಕು ಆಕೆಗೆ ಈ ಪಾಠವನ್ನು ಚಿಕ್ಕಂದಿನಲ್ಲೇ ಕಲಿಸಿದ್ದು ಇದೀಗ ಅದರ ಫಲವನ್ನು ಕಾಣಬಹುದಾಗಿತ್ತು.

ಮುಂದೆ 1992 ರಲ್ಲಿ ಅಮೆರಿಕದ ಅಧ್ಯಕ್ಷರಾದ ಜಾರ್ಜ್ ಎಚ್ ಡಬ್ಲ್ಯೂ ಬುಷ್ ಅವರು ಆಕೆಯನ್ನು ಫೆಡರಲ್ ಜಡ್ಜ್ ಎಂದು ನೇಮಕ ಮಾಡಿದರು. ಆಗ ಆಕೆಗೆ ಕೇವಲ 38 ವರ್ಷ ವಯಸ್ಸಾಗಿ–ತ್ತು. ಅಲ್ಲಿಂದ ಸರಿ ಸುಮಾರು 30 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಆಕೆಯನ್ನು ಪುಟ್ಟ ಊರಾದ ದ ಬ್ರಾಂಕ್ಸ್ ನ ಜನರು ಪ್ರೀತಿಪೂರ್ವಕವಾಗಿ ಅಭಿನಂದಿಸಿದರು.

ಹದಿನಾಲ್ಕು ವರ್ಷಗಳ ನಂತರ ಮುಂದಿನ ಅಧ್ಯಕ್ಷರಾದ ಪ್ರೆಸಿಡೆಂಟ್ ಒಬಾಮಾ ಆಕೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಸುಪ್ರೀಂಕೋರ್ಟಿಗೆ ನೇಮಕ ಮಾಡಿದರು. ಅಲ್ಲಿ ಆಕೆಗೆ 68 ಪರವಾದ ಮತಗಳು ಹಾಗೂ 31 ವಿರೋಧದ ಮತಗಳು ದೊರೆತು ಲ್ಯಾಟಿನ್ ಭಾಷೆ ಮಾತನಾಡುವ ಮೊಟ್ಟಮೊದಲ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ಆಯ್ಕೆಯಾಗಿ ಐತಿಹಾಸಿಕ ದಾಖಲೆಯನ್ನು ಮಾಡಿದರು. ಅಲ್ಲದೆ ಸುಪ್ರೀಂ ಕೋರ್ಟನ ನ್ಯಾಯಾಧೀಶರಾದ ಮೂರನೇ ಮಹಿಳೆ ಮತ್ತು ಟೈಪ ಒನ್ ಡಯಾಬಿಟೀಸಿನಿಂದ ಬಳಲುತ್ತಿರುವ ಸುಪ್ರೀಂ ಕೋರ್ಟ್ ನ ಮೊದಲ ಮಹಿಳಾ ನ್ಯಾಯಾಧೀಶರು ಎಂದು ಗುರುತಿಸಿಕೊಂಡರು.

ಇದೀಗ 71 ರ ಹರೆಯದ ಜಸ್ಟಿಸ್ ಸೋನಿಯಾ ಪ್ರತಿದಿನ 4 ರಿಂದ 6 ಬಾರಿ ತನ್ನ ದೇಹದಲ್ಲಿ ಇನ್ಸುಲಿನ್ ಇಂಜೆಕ್ಷನ್ ಗಳನ್ನು ತಾನೇ ಮಾಡಿಕೊಳ್ಳುತ್ತಾರೆ. ಆಕೆಯು ತನ್ನ ದೇಹದ ಮೇಲೆ ಒಂದು ಇನ್ಸುಲಿನ್ ಮಾನಿಟರನ್ನ ಸದಾ ಧರಿಸಿರುತ್ತಾಳೆ. ಮೌಖಿಕವಾದ ವಾದಗಳನ್ನು ಆಲಿಸುವಾಗ ಒಂದಷ್ಟು ಗ್ಲುಕೋಸ್ ಚಾಕಲೇಟುಗಳನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ತನ್ನಂತೆಯೇ ತೀವ್ರವಾದ ಆರೋಗ್ಯ ಸಮಸ್ಯೆ ಹೊಂದಿರುವ ಮಕ್ಕಳಿಗಾಗಿ ಪುಸ್ತಕವನ್ನು ಬರೆದಿರುವ ಆಕೆ ಅತ್ಯಂತ ಸರಳವಾಗಿ ಹೇಳುವುದು ಇಷ್ಟೇ

ಅನಿವಾರ್ಯವಾಗಿಯಾದರೂ ನೀವು ಬದುಕಲೇಬೇಕಾದ ಜೀವನ ಶೈಲಿಯಿದು.ಇದನ್ನು ನೀವು ಒಪ್ಪಿ ಅಪ್ಪಿಕೊಳ್ಳಲೇಬೇಕು.

ಇಂದಿಗೂ ಆಕೆ ಸುಪ್ರೀಂ ಕೋರ್ಟ್ ನಲ್ಲಿ ಕುಳಿತುಕೊಳ್ಳುತ್ತಾರೆ. ಕೇಸುಗಳ ಕುರಿತು ನಿರ್ಣಯವನ್ನು ಕೈಗೊಳ್ಳುತ್ತಾರೆ 1962 ರಲ್ಲಿ ಇನ್ನು ಕೆಲವೇ ದಿನಗಳು ಮಾತ್ರ ಬದುಕಲು ಸಾಧ್ಯ ಎಂದು ಅಂದಿನ ವೈದ್ಯಕೀಯ ವ್ಯವಸ್ಥೆಯ ಮಿತಿಗಳ ಕಾರಣ ಆಕೆಯ ಭವಿಷ್ಯವನ್ನು ನಿರ್ಧರಿಸಿದ ವೈದ್ಯರ ನಿರೀಕ್ಷೆಯನ್ನು ಮೀರಿ ಆಕೆ ಬದುಕಿದ್ದಾಳೆ.... ತನ್ನ ಸ್ವಂತ ಬಲದ ಮೇಲೆ. ಪ್ರತಿದಿನ ಮುಂಜಾನೆ ಬೆಳಗಿನ ಬ್ರೇಕ್ ಫಾಸ್ಟ್ ಗೆ ಮುನ್ನ ಕಡ್ಡಾಯವಾಗಿ ಇನ್ಸುಲಿನ್ ಇಂಜೆಕ್ಷನ್ ಪಡೆಯಲೇಬೇಕು ಎಂಬ ವೈದ್ಯರ ಹೇಳಿಕೆಯ ಮೇರೆಗೆ ಪ್ರತಿದಿನ ಔಷಧಿಯನ್ನು ಯಾರು ಆಕೆಗೆ ಇಂಜೆಕ್ಟ್ ಮಾಡಬೇಕು ಎಂಬ ಹಿರಿಯರು ಬಗೆಹರಿಸಲಾಗದ ಹಾಗೂ ನಿರ್ಣಯಿಸಲಾಗದ ಸವಾಲೊಂದನ್ನು ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಸಮಾಧಾನದಿಂದ ಹಾಗೂ ಶಾಂತಿಯುತವಾಗಿ ಬಗೆಹರಿಸಿದ ಅಂದಿನ ಪುಟ್ಟ ಬಾಲೆ ಇಂದಿಗೂ ಕೂಡ ತನ್ನನ್ನು ತಾನೇ ಸಂಭಾಳಿಸಿಕೊಳ್ಳುತ್ತಾಳೆ..... ತನಗೆ ತಾನೇ ಕೊಟ್ಟುಕೊಂಡ ಮಾತಿಗೆ. ಆಕೆಯ ಸಂಕಲ್ಪ ಶಕ್ತಿಗೆ ನಮ್ಮ ನಮನಗಳು.



ವೀಣಾ ಹೇಮಂತ್ ಗೌಡ ಪಾಟೀಲ್

## ಒಂದು ಗಂಟೆಕ್ಕೂ ಹೆಚ್ಚು ಕಾಲ ಸುರಿದ ಮಳೆ ಗದಗನಲ್ಲಿ ಗಟಾರು ತುಂಬಿ ರಸ್ತೆ ಅವಾಂತರ



ಗದಗ: ನಗರದಲ್ಲಿ ಒಂದು ಗಂಟೆಗೂ ಅಧಿಕ ಕಾಲ ಸುರಿದ ಮಳೆಯಿಂದಾಗಿ ರಸ್ತೆಗಳೆಲ್ಲ ಕೆರೆಯಂತಾಗಿ ಮಾರ್ಪಟ್ಟವು. ನಗರದ ಮಧ್ಯಭಾಗದ ಪಂಚರಹೊಂಡ ರಸ್ತೆಯೆಲ್ಲ ಜಲಾವೃತವಾಗಿತ್ತು.

ಗಟಾರು ತುಂಬಿ ರಸ್ತೆ ಮೇಲೆ ಹರಿದ ಗಲೀಜು ಮಿಶ್ರಿತ ಮಳೆ ನೀರು ಹಾಗೂ ಗಟಾರಿನ ಕಪ್ಪು ನೀರಿನಿಂದ ಆವೃತವಾದ ನಗರದ ಪ್ರಮುಖ ರಸ್ತೆಗಳು, ಪ್ರತಿಸಲ ಮಳೆ ಸಂದರ್ಭದಲ್ಲೂ ಗಟಾರು ತುಂಬಿ ಅವಾಂತರ ಸೃಷ್ಟಿಯಾಗುತ್ತಲೇ ಇವೆ. ಶಾಶ್ವತ ಪರಿಹಾರ ಕಲ್ಪಿಸಬೇಕಿದ್ದ ನಗರಸಭೆ ಅಧಿಕಾರಿಗಳ ಜಾಣಕುರುಡುತನ ಹಾಗೂ ನಿರ್ಲಕ್ಷ್ಯದಿಂದ ಜನರು ಪರತಪಿಸುವಂತಾಗುತ್ತಿದೆ. ನಗರದ ಪ್ರಮುಖ ವ್ಯಾಪಾರಿ ಕೇಂದ್ರದ ದುಸ್ಥಿಗೆ ಜನರು ಆಕ್ರೋಶಗೊಂಡಿದ್ದು, ಶಾಶ್ವತ ಪರಿಹಾರ ಕಲ್ಪಿಸುವಂತೆ ಒತ್ತಾಯ ಮಾಡುತ್ತಿದ್ದಾರೆ. ಇನ್ನುಮುಂದೆ ಮಳೆ ಹೆಚ್ಚಾಗಲಿರುವ ಕಾರಣ ಶೀಘ್ರವೇ ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಬೇಕಿದೆ.

## ಶಾಪಿಂಗ್‌ಗೆ ಹೋಗುವುದಾಗಿ ಹೇಳಿ ನಾಪತ್ತೆಯಾಗಿದ್ದ ಗೃಹಿಣಿ ಶವವಾಗಿ ಪತ್ತೆ

ಬೆಂಗಳೂರು: ಶಾಪಿಂಗ್‌ಗೆ ಹೋಗುವುದಾಗಿ ಹೇಳಿ ನಾಪತ್ತೆಯಾಗಿದ್ದ ಗೃಹಿಣಿ ಕೆರೆಯಲ್ಲಿ ಶವವಾಗಿ ಪತ್ತೆಯಾಗಿದ್ದು, ಮಗಳ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಆಕೆಯ ತಾಯಿ ಕುಂಬಳಗೋಡು ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.ಕೊಮ್ಮಘಟ್ಟದ ನಿವಾಸಿ ಚೈತ್ರಾ (29) ಮೃತಪಟ್ಟ ಗೃಹಿಣಿ.
2020 ರಲ್ಲಿ ಶರತ್‌ಕುಮಾರ್ ಎಂಬಾತನನ್ನು ಪ್ರೀತಿಸಿ ಮದುವೆಯಾಗಿದ್ದು, ಕೊಮ್ಮಘಟ್ಟದಲ್ಲಿ ಬಾಡಿಗೆ ಮನೆ ಮಾಡಿಕೊಂಡು ದಂಪತಿ ವಾಸವಾಗಿದ್ದು, ಒಬ್ಬಳು ಮಗಳಿದ್ದಾಳೆ.ಈ ನಡುವೆ ವರದಕ್ಷಿಣೆ ತರುವಂತೆ ಚೈತ್ರಾಗೆ ಪತಿ ಕಿರುಕುಳ ನೀಡುತ್ತಿದ್ದನು. ಇದೇ ವಿಚಾರವಾಗಿ ಆಗಾಗ್ಗೆ ದಂಪತಿ ನಡುವೆ ಜಗಳವಾಗುತ್ತಿದ್ದರಿಂದ ತವರು ಮನೆಯವರು ಹಣ ಕೊಟ್ಟು ರಾಜಿ ಪಂಚಾಯಿತಿ ಮಾಡಿ ಅನ್ಯೋನ್ಯವಾಗಿ ಜೀವನ ಸಾಗಿಸುವಂತೆ ಬುದ್ದಿವಾದ ಹೇಳಿದ್ದಾರೆ.



ಕೆಲ ದಿನಗಳ ನಂತರ ಮತ್ತೆ ಶರತ್ ಮನೆಗೆ ಮದ್ಯ ಸೇವಿಸಿ ಬಂದು ಪತ್ನಿ ಜೊತೆ ಕ್ಯಾತೆ ತೆಗೆದು ಕಾರು ತೆಗೆದುಕೊಳ್ಳಲು ತವರಿನಿಂದ ಹಣ ತರುವಂತೆ ಕಿರುಕುಳ ನೀಡಲಾರಂಭಿಸಿದ್ದಾನೆ. ಪತಿಯ ವರ್ತನೆಯಿಂದ ಚೈತ್ರಾ ಬೇಸತ್ತು ಹೋಗಿದ್ದಳು.ಮೊನ್ನೆ ಬೆಳಗ್ಗೆ 10.30 ರ ಸುಮಾರಿನಲ್ಲಿ ಚೈತ್ರಾ ಗಂಡನಿಗೆ ಕರೆ ಮಾಡಿ ಮಗಳು ಏಷಿಕಾಳನ್ನು ಪಕ್ಕದ ಮನೆಯಲ್ಲಿ ಬಿಟ್ಟು ನಾನು ಶಾಪಿಂಗ್‌ಗೆ ಹೋಗಿ ಬರುತ್ತೇನೆಂದು ಹೇಳಿ ಹೋಗಿದ್ದಾಳೆ. ಆದರೆ ಸಂಜೆಯಾದರೂ ಬಂದಿಲ್ಲ. ಎಲ್ಲಾ ಕಡೆ ಹುಡುಕಾಡಿದರೂ ಆಕೆಯ ಸುಳಿವು ಸಿಕ್ಕಿಲ್ಲ. ಹಾಗಾಗಿ ಹೇರೋಹಳ್ಳಿ ಕ್ರಾಸ್‌ನ ಮಹದೇಶ್ವರ ನಗರದಲ್ಲಿರುವ ಅತ್ತೆ ಲಕ್ಷ್ಮೀದೇವಮ್ಮ ಅವರಿಗೆ ಕರೆ ಮಾಡಿ ನಿಮ್ಮ ಮಗಳು ಕಾಣುತ್ತಿಲ್ಲವೆಂದು ತಿಳಿಸಿದ್ದಾನೆ?. ತಕ್ಷಣ ಲಕ್ಷ್ಮೀದೇವಮ್ಮ ಅವರು ಸಂಬಂಧಿಕರು ಹಾಗೂ ಚೈತ್ರಾ ಸ್ನೇಹಿತರಿಗೆ ಕರೆ ಮಾಡಿ ವಿಚಾರಿಸಿದ್ದಾರೆ.ಈ ನಡುವೆ ನಿನ್ನೆ ಬೆಳಗ್ಗೆ 8 ಗಂಟೆ ಸುಮಾರಿನಲ್ಲಿ ಶರತ್ ಅತ್ತೆ ಮನೆಗೆ ಕರೆ ಮಾಡಿ ಚೈತ್ರಾ ಕುಮ್ಮಘಟ್ಟ ಕೆರೆಯಲ್ಲಿ ಬಿದ್ದು ಸತ್ತಿದ್ದಾಳೆ ಎಂದು ಹೇಳಿದ್ದಾನೆ.ಈ ವಿಷಯ ಕೇಳಿ ಅಘಾತಕ್ಕೊಳಗಾದ ಅತ್ತೆ ಮನೆಯವರು ಸ್ಥಳಕ್ಕೆ ಬಂದು ಮೃತದೇಹವನ್ನು ನೋಡಿ ತಮ್ಮ ಮಗಳದ್ದೇ ಎಂದು ಹೇಳಿದ್ದಾರೆ.ನಂತರ ಕುಂಬಳಗೋಡು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ತಮ್ಮ ಮಗಳ ಸಾವಿಗೆ ಅಳಿಯ ಶರತ್‌ಕುಮಾರ್ ಕಾರಣ. ಆತ ವರದಕ್ಷಿಣೆಗಾಗಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದ ಹಿಂಸೆಯೇ ಇದಕ್ಕೆ ಕಾರಣ. ನನ್ನ ಮಗಳ ಸಾವಿನ ಬಗ್ಗೆ ಸಂಶಯವಿದ್ದು, ಕೂಲಂಕುಶವಾಗಿ ತನಿಖೆ ಮಾಡಿ ಸೂಕ್ತ ನ್ಯಾಯ ದೊರಕಿಸಿಕೊಡುವಂತೆ ದೂರಿನಲ್ಲಿ ಅಳಲು ತೋಡಿಕೊಂಡಿದ್ದಾರೆ. ಪ್ರೀತಿಸಿದ ಯುವಕನನ್ನು ನಂಬಿ ಆತನೊಂದಿಗೆ ಮದುವೆಯಾಗಿ ಕೇವಲ 6 ವರ್ಷದೊಳಗೆ ಚೈತ್ರಾ ಜೀವನ ಅಂತ್ಯಗೊಳಿಸಿಕೊಂಡಿರುವುದು ದುರ್ದೈವ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕ್ವಾರಿ ಹಾಗೂ ಸ್ಟೋನ್ ಕ್ರಷರ್ ಮಾಲೀಕರ ಅಳಲು ಜಲ್ಲಿ ದರ ಏರಿಕೆ ಅನಿವಾರ್ಯ

ಗದಗ: ದೇಶದಲ್ಲಿ ಪೆಟ್ರೋಲ್, ಡೀಸೆಲ್, ವಿದ್ಯುತ್, ಆಯಿಲ್, ಗ್ರೀಸ್, ಕಾರ್ಮಿಕರ ವೇತನ ಸೇರಿದಂತೆ ಕಲ್ಲುಗಣಿ ಹಾಗೂ ಸ್ಟೋನ್ ಕ್ರಷರ್ ಉದ್ಯಮಕ್ಕೆ ಅಗತ್ಯವಿರುವ ಎಲ್ಲ ಪರಿಕರಗಳ ಬೆಲೆ ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಜಲ್ಲಿ ಹಾಗೂ ಇತರೆ ಕಲ್ಲು ಉತ್ಪನ್ನಗಳ ದರ ಹೆಚ್ಚಳ ಅನಿವಾರ್ಯವಾಗಿದೆ ಎಂದು ಗದಗ ಕ್ವಾರಿ ಹಾಗೂ ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಆರ್ ಸಿ ಕಾಮಾಜಿ ಹೇಳಿದರು.

ಅವರು ನಗರದ ಪತ್ರಿಕಾಭವನದಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸಿ, ಸಂಘದ ಪದಾಧಿಕಾರಿಗಳು, ಸ್ಟೋನ್ ಕ್ರಷರ್ ಉದ್ಯಮದ ಮೇಲೆ ಸರ್ಕಾರ ಇಲ್ಲದ ಕಾನೂನುಗಳನ್ನು ಜಾರಿಗೆ ತಂದು ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿದರು. ರಾಜಧನ (ರಾಯಲ್ಟಿ) ಮೊತ್ತವನ್ನು ಹೆಚ್ಚಿಸಿರುವುದಲ್ಲದೇ ಕಲ್ಲುಗಣಿಗಳ ಮೇಲೆ ಪದೇ ಪದೇ ದಂಡ ವಿಧಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿ ವರ್ಷ ಗಣಿ ಮತ್ತು



ಕ್ರಷರ್‌ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ (ಆಒಉ) ಅಡಿಟ್ ಮಾಡಿ ವರದಿ ನೀಡುತ್ತಿದ್ದರೂ, ಇದೀಗ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕೆ ಕೇಂದ್ರ (KSRSAC) ನಡೆಸಿದ ಡ್ರೋನ್ ಸರ್ವೆ ವರದಿಯ ಆಧಾರದ ಮೇಲೆ ಒನ್ ಟೈಮ್ ಸೆಟಲ್‌ಮೆಂಟ್ (ಔಖಿಖ) ಹೆಸರಿನಲ್ಲಿ ಭಾರೀ ಪ್ರಮಾಣದ ದಂಡದ ನೋಟಿಸ್‌ಗಳನ್ನು ನೀಡಲಾಗುತ್ತಿದೆ. ಇದರಿಂದ ಇಲಾಖೆಯ ಅಡಿಟ್ ವರದಿಗಳ ಮಹತ್ವವೇ ಪ್ರಶ್ನಾರ್ಥ–ಕವಾಗಿದೆ ಎಂದು ಸಂಘ ಆರೋಪಿಸಿದೆ. ಇನ್ನು 2005–06ರಿಂದ 2024ರವರೆಗೆ ಸುಮಾರು 18 ವರ್ಷಗಳ ಅವಧಿಯ ಡ್ರೋನ್ ಸರ್ವೆ ವರದಿಯನ್ನು ಆದ–ಾರವಾಗಿಟ್ಟುಕೊಂಡು ಪ್ರಸ್ತುತ ಮಾಲೀಕರಿಗೆ ದಂಡ ವಿಧಿಸುವುದು ನ್ಯಾಯ ಸಮ್ಮತವಲ್ಲ. ಹಿಂದಿನ ತಲೆಮಾರುಗಳ ಅವಧಿಯ ಲೆಕ್ಕಾಚಾರವನ್ನು ಈಗಿನ ಮಾಲೀಕರ ಮೇಲೆ ಹೊರಿಸುವುದು ಸರಿಯಲ್ಲ ಎಂದು ಸಂಘದ ಕಾರ್ಯದರ್ಶಿ ಸುರೇಂದ್ರರೆಡ್ಡಿ ಅಭಿಪ್ರಾಯಪಟ್ಟರು.

ಒಂದೇ ವಸ್ತುವಿನ ಮೇಲೆ ಎರಡು ಕಡೆ ರಾಯಲ್ಟಿ ಸಂಗ್ರಹಿಸಲಾಗುತ್ತಿದೆ. ಗಣಿಗಳಿಂದ ಒಂದು ಬಾರಿ ಹಾಗೂ ಸರ್ಕಾರಿ ಕಾಮಗಾ–ರಿಗಳ ಗುತ್ತಿಗೆದಾರರಿಂದ ಮತ್ತೊಮ್ಮೆ ರಾಯಲ್ಟಿ ಪಡೆಯಲಾಗುತ್ತಿದೆ ಎಂದು ಸಂಘ ದೂರಿದೆ. ಈ ಎಲ್ಲ ಕಾರಣಗಳಿಂದ ಉತ್ಪಾದನಾ ವೆಚ್ಚ ಭಾರೀ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಜಲ್ಲಿ ಹಾಗೂ ಇತರೆ ಕಲ್ಲು ಉತ್ಪನ್ನಗಳ ಬೆಲೆ ಏರಿಕೆ ಮಾಡುವುದು ಅನಿವಾರ್ಯ ಪರಿಸ್ಥಿತಿಯಾಗಿದೆ. ತಮ್ಮ ಸಮಸ್ಯೆಗಳನ್ನು ಸಾರ್ವಜನಿಕರು ಹಾಗೂ ಗ್ರಾಹಕರ ಗಮನಕ್ಕೆ ತರಲು ಮಾಧ್ಯಮಗಳ ಮೂಲಕ ಮನವಿ ಮಾಡಿದರು. ಇನ್ನು ಎರಡು ದಿನಗಳ ಕಾಲ ಕ್ರಷರ್ ಗಳನ್ನ ಬಂದ ಮಾಡಲಾಗುವುದು ಎಂದು ಹೇಳಿದರು

# ತೈಲ ಬೆಲೆ ಆಘಾತದಿಂದ ಆರ್ಥಿಕ ಅನಿಶ್ಚಿತತೆ ನಡುವೆಯೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ

ಮುಂಬೈ: ಪಶ್ಚಿಮ ಏಷ್ಯಾದಲ್ಲಿ ಮುಂದುವ–ರಿದಿರುವ ಸಂಘರ್ಷ, ಏರಿಕೆಯಾಗಿರುವ ಇಂಧನ ಬೆಲೆಗಳು ಹಾಗೂ ಜಾಗತಿಕ ಸರಬರಾಜು ಸರಪಳಿ ಅಡಚಣೆಗಳಿಂದ ಆರ್ಥಿಕ ಬೆಳವಣಿಗೆ ಮತ್ತು ಹಣದುಬ್ಬರದ ಮೇಲೆ ಹೆಚ್ಚುತ್ತಿರುವ ಅಪಾಯಗಳ ನಡುವೆಯೇ, ಭಾರತೀಯ ರಿಸರ್ವ್ ಬ್ಯಾಂಕ್ ಇಂದು ತನ್ನ ಮಾನದಂಡದ ರೆಪೊ ದರವನ್ನು ನಿರೀಕ್ಷೆಯಂತೆ ಶೇ. 5.25ರಲ್ಲೇ ಯಥಾಸ್ಥಿತಿಯಲ್ಲಿ ಉಳಿಸಿದೆ. ಜೊತೆಗೆ, ವಿದೇಶಿ ಬಂಡವಾಳವನ್ನು ಆಕರ್ಷಿಸಲು ಹಾಗೂ ರೂಪಾಯಿಗೆ ಬೆಂಬಲ ನೀಡಲು ಹಲವು ಕ್ರಮಗಳನ್ನು ಘೋಷಿಸಿದೆ.

ರೂಪಾಯಿ ಮೌಲ್ಯಕ್ಕೆ ಬೆಂಬಲ ನೀಡುವ ಉದ್ದೇಶದಿಂದ, ಸರ್ಕಾರಿ ಭದ್ರತಾ ಪತ್ರಿಕೆಗಳಲ್ಲಿ ಹೂಡಿಕೆ ಮಾಡುವ ಅರ್ಹ ವಿದೇಶಿ ಹೂಡಿಕೆದಾರರಿಗೆ ಬಡ್ಡಿ ಆದಾಯ ಮತ್ತು ಬಂಡವಾಳ ಲಾಭದ ಮೇಲಿನ ತೆ–ರಿಗೆಗಳನ್ನು ರದ್ದುಪಡಿಸುವುದು, ಅನಿವಾಸಿ ಭಾರತೀಯರ ವಿದೇಶಿ ಕರೆನ್ಸಿ ಠೇವಣಿಗಳಿಗೆ ರಿಯಾಯಿತಿ ಷರತ್ತುಗಳನ್ನು ಒದಗಿಸುವುದು ಹಾಗೂ ಆಯ್ದ ವಿದೇಶಿ ಸಾಲಗಳಿಗೆ ಹೆಡ್ಜಿಂಗ್ ವೆಚ್ಚಕ್ಕೆ ಸಹಾಯಧನ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ. ಹಣ–ಕಾಸು ನೀತಿ ಸಮಿತಿ ಏಕಮತದಿಂದ ರೆಪೊ ದರವನ್ನು ಶೇ. 5.25ರಲ್ಲೇ ಉಳಿಸುವುದಕ್ಕೂ, ತನ್ನ ತಟಸ್ಥ ನಿಲುವನ್ನು ಮುಂದುವರಿಸುವುದಕ್ಕೂ ಮತ ಚಲಾಯಿಸಿತು.ಸುದ್ದಿಗೋಷ್ಠಿಯಲ್ಲಿ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು, ಭಾರತವು ಹಿಂದಿನ ಬಿಕ್ಕಟ್ಟುಗಳಿಗಿಂತ ಬಲವಾದ ಸ್ಥೂಲ ಆರ್ಥಿಕ (ಮ್ಯಾಕ್ರೋ ಆರ್ಥಿಕ) ಅಡಿಪಾಯದೊಂದಿಗೆ ಈ ಜಾಗತಿಕ ಅಶಾಂತಿಯ ಹಂತವನ್ನು ಪ್ರವೇಶಿಸಿದೆ ಎಂದು ಹೇಳಿದ್ದಾರೆ. ಆದರೆ, ಹೆಚ್ಚುತ್ತಿರುವ ಭೌಗೋಳಿಕ–ರಾಜಕೀಯ ಉದ್ವಿಗ್ನತೆ, ಏರಿದ ಸರಕು ಬೆಲೆಗಳು ಮತ್ತು ಸರಬರಾಜು ಅಡಚಣೆಗಳು ಆರ್ಥಿಕ ಭವಿಷ್ಯದ ಮೇಲೆ ಅನಿಶ್ಚಿತತೆಯನ್ನು ಉಂಟುಮಾಡುತ್ತಿವೆ ಎಂದು ಎಚ್ಚರಿಸಿದರು.

ಜಾಗತಿಕ ಪರಿಸ್ಥಿತಿ ಹದಗೆಟ್ಟಿದೆ ಎಂಬುದನ್ನು ಸಮಿತಿಯು ಗಮನಿಸಿದೆ ಎಂದು ಅವರು ಹಣಕಾಸು ನೀತಿ ನಿರ್ಧಾರವನ್ನು ಪ್ರಕಟಿಸುವ ವೇಳೆ ಹೇಳಿದರು. ಹೆಚ್ಚಿನ ಸ್ಪಷ್ಟತೆ ಸಿಗುವವರೆಗೆ ಕಾಯುವುದು ಸೂಕ್ತ ಎಂದು ಸಮಿತಿ ಅಭಿಪ್ರಾಯಪಟ್ಟಿದೆ ಎಂದರು. ಹಣದುಬ್ಬರದ ಮೂಲಭೂತ ಒತ್ತಡಗಳು ಇನ್ನೂ ನಿಯಂತ್ರಣದಲ್ಲಿದ್ದರೂ, ಹೆಚ್ಚುತ್ತಿರುವ ವೆಚ್ಚಗಳು ವೇತನ ಮತ್ತು ಹಣದುಬ್ಬರ ನಿರೀಕ್ಷೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ. ಜೊತೆಗೆ, ಸಾಮಾನ್ಯಕ್ಕಿಂತ ಕಡಿಮೆ ಮಳೆಯ ಮುನ್ಸೂಚನೆ ಹಾಗೂ ಸಂಭವನೀಯ ಪರಿಸ್ಥಿತಿಯು ಮುಂದಿನ ತಿಂಗಳುಗಳಲ್ಲಿ ಆಹಾರ ಬೆಲೆಗಳ ಮೇಲೆ ಒತ್ತಡ ಉಂಟುಮಾಡಬಹುದು



ಎಂದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಆರ್ಥಿಕ ಬೆಳವಣಿಗೆಯ ನಿರೀಕ್ಷೆಯನ್ನು ಕಡಿತಗೊಳಿಸಿದ್ದು, 2026–27ನೇ ಸಾಲಿನ ನೈಜ ಜಿಡಿಪಿ ಬೆಳವಣಿಗೆ ದರವನ್ನು ಶೇ. 6.6 ಎಂದು ಅಂ–ದಾಜಿಸಿದೆ. ಇದು ಏಪ್ರಿಲ್‌ನಲ್ಲಿ ನೀಡಿದ್ದ ಶೇ. 6.9ರ ಮುನ್ಸೂಚನೆಗಿಂತ ಕಡಿಮೆಯಾಗಿದೆ. 2025–26ನೇ ಸಾಲಿಗೆ ಅಂದಾಜಿಸಲಾದ ಶೇ. 7.6ರ ಬೆಳವಣಿಗೆಗಿಂತಲೂ ಇದು ಕಡಿಮೆ. 2026–27ರಲ್ಲಿ ಹಣದುಬ್ಬರವು ಶೇ. 5.1ಕ್ಕೆ ಏರಿಕೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಮೂರನೇ ತ್ರೈಮಾಸಿಕದಲ್ಲಿ ಅದು ಶೇ. 5.9ಕ್ಕೆ ಗರಿಷ್ಠ ಮಟ್ಟ ತಲುಪಿ ಬಳಿಕ ಇಳಿಕೆಯಾಗುವ ನಿರೀಕ್ಷೆಯಿದೆ. ಇದಕ್ಕೂ ಮೊದಲು ವಾರ್ಷಿಕ ಚಿಲ್ಲರೆ ಹಣದುಬ್ಬರವನ್ನು ಶೇ. 4.6 ಎಂದು ಅಂ–ದಾಜಿಸಲಾಗಿತ್ತು. ಮೂಲಭೂತ ಹಣದುಬ್ಬರವನ್ನು ಶೇ. 4.7 ಎಂದು ಅಂದಾಜಿಸಲಾಗಿದ್ದು, ಇದು ಹಿಂದಿನ ಶೇ. 4.4ರ ಅಂದಾಜಿಗಿಂತ ಹೆಚ್ಚಾಗಿದೆ. ಒಟ್ಟಾರೆ ಹಣದುಬ್ಬರ ಯ ಶೇ. 4ರ ಗುರಿ ಮಿತಿಯೊಳಗೆ (ಶೇ. 2ರಿಂದ 6ರ ಸಹಿಷ್ಣುತೆ ವ್ಯಾಪ್ತಿಯಲ್ಲಿ) ಇದ್ದರೂ, ಜಾಗತಿಕ ಇಂಧನ ಬೆಲೆಗಳ ಏರಿಕೆ ಮತ್ತು ಸರಬರಾಜು ಆಘಾತಗಳು ವೇತನ ಹಾಗೂ ಹಣದುಬ್ಬರ ನಿರೀಕ್ಷೆಗಳ ಮೇಲೆ ದ್ವಿತೀಯ ಹಂತದ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಆರ್‌ಬಿಐಎಚ್ಚ–ರಿಸಿದೆ.

## ಆನ್‌ಲೈನ್ ಕೇರಳ ಲಾಟರಿ ಆಮಿಷಕ್ಕೊಳಗಾಗಿ 13.71 ಲಕ್ಷ ಹಣ ಕಳೆದುಕೊಂಡ ಇಬ್ಬರು

ಬೆಂಗಳೂರು: ನಗರದಲ್ಲಿ ಕೇರಳ ಲಾಟರಿ ಹೆಸರಿನಲ್ಲಿ ಹೊಸ ಸೈಬರ್ ವಂಚನೆ ಬೆಳಕಿಗೆ ಬಂದಿದ್ದು, ಇಬ್ಬರು ನಾಗರಿಕರು 13.71 ಲಕ್ಷ ಹಣ ಕಳೆದುಕೊಂಡಿದ್ದಾರೆ.ಸೈಬರ್ ವಂಚಕರು ಒಂದಲ್ಲಾ ಒಂದು ರೀತಿ ಮೋಸ ಮಾಡುವ ದಾರಿ ಹುಡುಕುತ್ತಿದ್ದಾರೆ. ಆ ದಾರಿಯಲ್ಲಿ ಅಮಾಯಕರು ಸಿಕ್ಕಿಕೊಂಡು ಲಕ್ಷಾಂತರ ಹಣ ಕಳೆದುಕೊಂಡು ಇದೀಗ ಕಂಗಾಲಾಗಿದ್ದಾರೆ.

ಇದುವರೆಗೂ ಸೈಬರ್ ವಂಚಕರು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಹಣ ದೋಚುತ್ತಿದ್ದರು. ಇದೀಗ ಆ ಬಗ್ಗೆ ನಗರ ಪೊಲೀಸರು ಜಾಗೃತಿ ವಹಿಸುವಂತೆ ಮನವಿ ಮಾಡಿದ್ದು, ಆ ಪ್ರಕರಣಗಳು ಕಡಿಮೆಯಾಗುತ್ತಿದ್ದಂತೆ ಇದೀಗ ಸೈಬರ್ ವಂಚಕರು ಮತ್ತೊಂದು ಆಮಿಷವೊಡ್ಡುತ್ತಿದ್ದಾರೆ. ನಗರದ ವಲಗೇರಹಳ್ಳಿಯ ಅರವತ್ತು ವರ್ಷದ ಎನ್‌ಜಿಓ ಉದ್ಯೋಗಿಯೊಬ್ಬರು 7.45 ಲಕ್ಷ ರೂ. ಹಾಗೂ ಮಾರುತಿನಗರದ ಐವತ್ತೆರಡು ವರ್ಷದ ರೈತರೊಬ್ಬರು ಕೇರಳ ಲಾಟರಿ ಹೆಸರಿನಲ್ಲಿ ಲಕ್ಷಾಂತರ ಹಣ ಬಂದಿದೆ ಎಂದು ವಂಚಕರ



ಮಾತಿಗೆ ಮರುಳಾಗಿ 6.26 ಲಕ್ಷ ರೂ. ಹಣ ಕಳೆದುಕೊಂಡಿದ್ದಾರೆ.

ಈ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ವಂಚಕರು ವಾಟ್ಸಪ್ ಮೂಲಕ ಕರೆ ಮಾಡಿ ನಿಮಗೆ ಕೇರಳ ಲಾಟರಿಯಲ್ಲಿ 8 ಲಕ್ಷ ಬಂದಿದೆ ಎಂದು ನಂಬಿಸಿದ್ದಾರೆ.ಲಾಟರಿ ಬಂದಿರುವುದನ್ನು ಖಚಿತ ಪಡಿಸಿಕೊಳ್ಳಲು ವಂಚಕರು ನಕಲಿ ವೆಬ್‌ಸೈಟ್ ಕಳುಹಿಸಿದ್ದಾರೆ. ಈ ಇಬ್ಬರು ಲಿಂಕ್ ಓಪನ್ ಮಾಡಿದಾಗ ಲಾಟರಿ ಗೆದ್ದಿರುವಂತೆ ನಕಲಿಯಾಗಿ ಎಡಿಟ್ ಮಾಡಿರುವುದನ್ನು ತೋ–ರಿಸಿದೆ.

ಇವರಿಬ್ಬರ ನಂಬಿಕೆ ಗಳಿಸಲು ಆರ್‌ಬಿಐ ಹೆಸರಿನ ನಕಲಿ ಪತ್ರಗಳನ್ನು ಕಳುಹಿಸಿದ್ದಾರೆ. ನಂತರ ಜಿಎಸ್‌ಟಿ , ಟಿಡಿಎಸ್ ಆದಾಯ ತೆ–ರಿಗೆ ಪಾವತಿಸುವಂತೆ ಹೇಳಿ ಹಂತ ಹಂತವಾಗಿ ಲಕ್ಷಾಂತರ ರೂಪಾಯಿಗಳನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಹಿಸಿಕೊಂಡು ನಂತರ ಇವ–ರಿಬ್ಬರ ಸಂಪರ್ಕಕ್ಕೆ ಸಿಕ್ಕಿಲ್ಲ. ತದ ನಂತರ ತಾವು ಮೋಸ ಹೋಗಿರುವುದಾಗಿ ಅರಿತು ನಗರದ ಸೈಬರ್ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.
ಎಚ್ಚರಿಕೆ: ಕರ್ನಾಟಕದಲ್ಲಿ ಈಗಾಗಲೇ ಲಾಟ–ರಿಯನ್ನು ನಿಷೇಧಿಸಿದ್ದರೂ ನಾಗರಿಕರಿಗೆ ಲಾಟರಿ ವ್ಯಾಮೋಹ ಹೋಗಿಲ್ಲ. ಕೇರಳ ಸರ್ಕಾರದ ಲಾಟರಿ ಟಿಕೆಟ್‌ಗಳು ಕಾಗದದ ರೂಪದಲ್ಲಿರುತ್ತವೆ. ಎಂದಿಗೂ ಆನ್‌ಲೈನ್‌ನಲ್ಲಿ ಮಾರಾಟ ಮಾಡುವುದಿಲ್ಲ. ಹೀಗಾಗಿ ಇಂತಹ ಆನ್‌ಲೈನ್ ಲಾಟರಿ ಆಮಿಷಗಳ ಬಗ್ಗೆ ಸಾರ್ವಜನಿಕರು ಎಚ್ಚರದಿಂದಿರಬೇಕೆಂದು ಸೈಬರ್ ಪೊಲೀಸರು ಮನವಿ ಮಾಡಿದ್ದಾರೆ.

# ಸಂಧಾನ ಮಾತುಕತೆಗೆ ರಾಮಲಿಂಗಾರೆಡ್ಡಿ ತಿರಸ್ಕಾರ

ಬೆಂಗಳೂರು: ರಾಜೀನಾಮೆ ನೀಡಲು ನಿರ್ಧ–ರಿಸಿದ ಬಳಿಕ ಸಚಿವ ರಾಮಲಿಂಗಾರೆಡ್ಡಿ ಸಂಧಾನ ಮಾತುಕತೆಗಳಿಗೆ ಒಪ್ಪದೇ ಬೆಂಬಲಿಗರೊಂದಿಗೆ ನಿಷ್ಠೂರವಾಗಿ ನಡೆದುಕೊಂಡಿದ್ದಾರೆ.
ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವ–ರಿಗೆ ನಿನ್ನೆಯೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಯತ್ನಿಸಿದರು. ಆದರೆ ಅದಕ್ಕೆ ಮುಖ್ಯಮಂತ್ರಿಯವರು ಆಸ್ಪದ ನೀಡದೇ ತಮ ಎಂದಿನ ಶೈಲಿಯಲ್ಲಿ ರಾಜೀನಾಮೆಯನ್ನು ತಳ್ಳಿ ಹಾಕಿದರು.

ನಿನ್ನೆಯಿಂದ ಅಂತರ್ಮುಖಿಯಾಗಿದ್ದ ರಾಮಲಿಂಗಾರೆಡ್ಡಿಯವರು ಇಂದು ಬೆಳಗ್ಗೆ ಕೋರಮಂಗಲದ ಶಾಸಕರ ಕಚೇರಿಯಲ್ಲಿ ರಾಜೀನಾಮೆಯನ್ನು ಘೋಷಿಸಲು ತುರ್ತು ಪತ್ರಿಕಾಗೋಷ್ಠಿ ಕರೆದಿದ್ದರು. ಇದಕ್ಕೂ ಮೊದಲು ಎಐಸಿಸಿ ಕಾರ್ಯದರ್ಶಿ ಅಭಿಷೇಕ್‌ದತ್ತ, ರಾಮಲಿಂಗಾರೆಡ್ಡಿಯವರನ್ನು ಭೇಟಿ ಮಾಡಿ ಮನವೊಲಿಸುವ ಪ್ರಯತ್ನ ಮಾಡಿದರು. ಆದ–ರೆ ಇದಕ್ಕೆ ಜಗ್ಗದ ಅವರು ರಾಜೀನಾಮೆಯ ನಿರ್ಧಾರ ಅಚಲ ಎಂದು ಪಟ್ಟು ಹಿಡಿದಿದ್ದಾರೆ. ಪತ್ರಿಕಾ ಗೋಷ್ಠಿ ಆರಂಭಕ್ಕೂ ಮುನ್ನ ಕಾಂಗ್ರೆಸ್ ನಾಯಕರಾದ ಮಂಜುನಾಥ್ ರೆಡ್ಡಿ, ಎಸ್. ಮನೋಹರ್, ಉದಯ್‌ಶಂಕರ್ ಸೇ–ರಿದಂತೆ ಹಲವಾರು ಮಂದಿ ಪತ್ರಿಕಾಗೋಷ್ಠಿ ಬೇಡ, ಹೈಕಮಾಂಡ್ ನಾಯಕರ ಜೊತೆ ಮಾತನಾಡಿ ಎಂದು ಮನವೊಲಿಸುವ ಪ್ರಯತ್ನ ಮಾಡಿದರು. ಆಗ ನಿಷ್ಠೂರವಾಗಿ ನಡೆದುಕೊಂಡ ರಾಮಲಿಂಗಾರೆಡ್ಡಿ ತಾವು ಯಾರ ಜೊತೆಗೂ ಮಾತನಾಡುವುದಿಲ್ಲ, ಯಾವ ಸಂಧಾನವೂ ಬೇಡ. ಈ ಬಗ್ಗೆ ಪ್ರಯತ್ನ ಮಾಡುವವರು ಹೊರ ಹೋಗಿ, ನಾನು ಏಕಾಂಗಿಯಾಗಿಯೇ ಪತ್ರಿಕಾಗೋಷ್ಠಿ ನಡೆಸುತ್ತೇನೆ ಎಂದು ಖಾರವಾಗಿ ಹೇಳಿದ್ದಾರೆ.

ಪಕ್ಷದ ಅಧ್ಯಕ್ಷರೇ ನಿಮೊಂದಿಗೆ ಮಾತನಾಡುತ್ತಾರೆ ಎಂದು ಹೇಳಿದಾಗ, ಅದಕ್ಕೂ ಸಿಡಿಮಿಡಿಯಾದ ರಾಮಲಿಂಗಾರೆಡ್ಡಿಯವರು



ತಾವು ಯಾರೊಂದಿಗೂ ಮಾತನಾಡುವುದಿಲ್ಲ ನನಗೆ ಕೋಪ ಬರುವಂತೆ ಮಾಡಬೇಡಿ ಎಂದು ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಡಿ ಎಂದು ಬೆಂಬಲಿಗರು ಒತ್ತಾಯ ಮಾಡಿದ್ದು, ರಾಮಲಿಂಗಾರೆಡ್ಡಿ ಅವರ ಕಾರಿಗೆ ಅಡ್ಡಲಾಗಿ ಮಲಗಿ ಹೈಡ್ರಾಮ ಸೃಷ್ಟಿಸಿದ್ದಾರೆ. ಸಚಿವರಾದ ಎರಡೇ ದಿನದಲ್ಲಿ ರಾಜೀನಾಮೆ ನೀಡುವ ಮೂಲಕ ಕಾಂಗ್ರೆಸ್‌ನಲ್ಲಿ ಸ್ಫೋಟಕ ಬೆಳವಣಿಗೆಗೆ ಕಾರಣವಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಅವರು ರಾಜ್ಯಸಭೆ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಲು ಬೆಂಗಳೂರಿಗೆ ಆಗಮಿಸುತ್ತಿರುವ ಸಂದರ್ಭದಲ್ಲೇ ರಾಮಲಿಂಗರೆಡ್ಡಿ ಅವರ ರಾಜೀನಾಮೆ ಪ್ರಹಸನ ಮುಜುಗರ ಉಂಟು ಮಾಡಿದೆ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101.
Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101.